ಸ್ಥಾಪನೆ: ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು (ನೋಂದಾಯಿತ)

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮**

**ದೂರವಾಣಿ : ೦೮೦ – ೨೬೬೨೩೫೮೪ / ೨೬೬೧೨೯೯೧ / ೨೬೬೭೨೯೯೨ / ೨೨೪೨೩೮೬೭**

Email : kannadaparishattu@gmail.com http://www.kasapa.in

---

**ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, ೨೦೦೫ರ ಕಲಂ ೪ (೧) (ಬಿ) ಅಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾರ್ವಜನಿಕ ತಿಳುವಳಿಕೆಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.**

## ೧. ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, ೨೦೦೫ರ (ಕಲಂ ೪ (೧) (ಬಿ) (I) ರಂತೆ ಕನ್ನಡ ಸಾಹಿತ್ಯ ಪರಿಷತ್ತಿನ ರಚನೆ:

ಮೈಸೂರು ಮಹಾರಾಜರಾದ **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್** ಅವರ ಪೋಷಣೆಯೊಂದಿಗೆ, **ಸರ್ ಎಂ. ವಿಶ್ವೇಶ್ವರಯ್ಯ** ಹಾಗೂ **ಸರ್ ಮಿರ್ಜಾ ಇಸ್ಮಾಯಿಲ್** ಅವರ ಸಹಕಾರದೊಂದಿಗೆ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ೧೦೯ ವರ್ಷಗಳ ಸುದೀರ್ಘ ಹಾಗೂ ಶ್ರೀಮಂತ ಇತಿಹಾಸವನ್ನು ಹೊಂದಿದ್ದು, ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿದೆ ಹಾಗೂ ಎಲ್ಲ ಕನ್ನಡ ಸಂಘ–ಸಂಸ್ಥೆಗಳಿಗೆ ಮಾತೃಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ಜೊತೆಗೆ ಕನ್ನಡ–ಕನ್ನಡಿಗ–ಕರ್ನಾಟಕದ ಹಿತರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುವ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾದ ಸಂಸ್ಥೆ. ಈ ಮಹಾಸಂಸ್ಥೆ ಅನೇಕ ವಿದ್ವಾಂಸರ, ನಾಡುನುಡಿಯ ಅಭಿಮಾನಿಗಳ ಮತ್ತು ಸರಕಾರದ ಪ್ರೋತ್ಸಾಹ ಪಡೆದುಕೊಂಡು ಜನತೆಯಲ್ಲಿ ಹೊಸ ರೀತಿಯ ಉತ್ಸಾಹವನ್ನೂ, ಭಾಷಾ ಅಭಿಮಾನವನ್ನೂ ತುಂಬುತ್ತಾ ಬಂದಿದೆ. ಕನ್ನಡಿಗರ ಬದುಕು ಹಸನಾಗಬೇಕೆಂದು ಪರಿಷತ್ತು ಅವಿರತವಾಗಿ ಕಾರ್ಯೋನ್ಮುಖವಾಗಿದೆ. ಅದರಿಂದಾಗಿ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕರ್ನಾಟಕದ ಪ್ರಬಲ ಸಾಂಸ್ಕೃತಿಕ ಕೇಂದ್ರವಾಗಿದೆ. ಇದರ ಕಾರ್ಯಕ್ಷೇತ್ರ ವ್ಯಾಪ್ತಿಯು, ಇಡೀ ಕರ್ನಾಟಕ ರಾಜ್ಯ, ಗಡಿನಾಡು/ರಾಜ್ಯಗಳು, ಕನ್ನಡಿಗರು ವಾಸಿಸುವ ಹೊರರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ವಿದೇಶಗಳಿಗೂ ವಿಸ್ತಾರವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ ನಿಬಂಧನೆಯಂತೆ ಚುನಾಯಿತಗೊಂಡ ಒಬ್ಬ ಅಧ್ಯಕ್ಷರು ಪರಿಷತ್ತಿನ ಮುಖ್ಯ ಆಡಳಿತ ನಿರ್ವಹಿಸುತ್ತಾರೆ. ಅಧ್ಯಕ್ಷರಿಂದ ನಾಮನಿರ್ದೇಶನಗೊಂಡ ಇಬ್ಬರು ಕಾರ್ಯದರ್ಶಿಗಳು ಹಾಗೂ ನಾಮ ನಿರ್ದೇಶನಗೊಂಡ ಒಬ್ಬ ಗೌರವ ಕೋಶಾಧ್ಯಕ್ಷರು ಆಡಳಿತದ ಭಾಗವಾಗಿ ಕಾರ್ಯ ನಿರ್ವಹಿಸುತ್ತಾರೆ.

ಕೇಂದ್ರ ಪರಿಷತ್ತಿನ ವ್ಯಾಪ್ತಿಯಲ್ಲಿ ಕೇಂದ್ರ ಕಾರ್ಯಕಾರಿ ಸಮಿತಿ, ೩೧ ಜಿಲ್ಲಾಘಟಕಗಳು, ೨೫೮ ತಾಲ್ಲೂಕು/ಕ್ಷೇತ್ರ ಘಟಕಗಳು (ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಆನೇಕಲ್‌ಗೆ ಸಂಬಂಧಿಸಿದಂತೆ ಒಟ್ಟು ೨೮ ವಿಧಾನಸಭೆ ಕ್ಷೇತ್ರಗಳು ಇರುವುದರಿಂದ, ಪ್ರತಿ ವಿಧಾನಸಭಾ ಕ್ಷೇತ್ರವನ್ನು ಪರಿಷತ್ತಿನ ಆಡಳಿತಕ್ಕೋಸ್ಕರವಾಗಿ ಒಂದು ತಾಲ್ಲೂಕನ್ನಾಗಿ ಪರಿಗಣಿಸಿ, ಪ್ರತಿ ಕ್ಷೇತ್ರಕ್ಕೂ ಪರಿಷತ್ತಿನ ಒಂದು ಘಟಕವನ್ನು ರಚಿಸಲಾಗಿದೆ.) ೮೭೧ ಹೋಬಳಿ ಘಟಕಗಳು, ಬೃಹತ್ ಬೆಂಗಳೂರು, ಮಹಾನಗರ

ಪಾಲಿಕೆಗೆ ಸಂಬಂಧಿಸಿದಂತೆ ವಾರ್ಡ್ ಘಟಕಗಳು, ೦೬ ಗಡಿನಾಡು/ರಾಜ್ಯ ಘಟಕಗಳು (ಗಡಿನಾಡು/ರಾಜ್ಯಗಳಾದ ತಮಿಳು ನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ ಗಡಿನಾಡು/ರಾಜ್ಯ ಘಟಕಗಳನ್ನು ಕೇಂದ್ರ ಪರಿಷತ್ತು ರಚಿಸಲಾಗಿದೆ.) ಹೊರರಾಜ್ಯ ಕೇಂದ್ರಾಡಳಿತ ಘಟಕ, ವಿದೇಶಿ ಘಟಕಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮೋದನೆಯೊಂದಿಗೆ ರಚಿಸಲಾಗುತ್ತದೆ.

**೨. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಗಳು:**

ಕನ್ನಡ ಸಾಹಿತ್ಯ ಪರಿಷತ್ತು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯ ಅಧ್ಯಕ್ಷರು ನೇರವಾಗಿ ಸದಸ್ಯರಿಂದ ಚುನಾಯಿತರಾಗಿರುತ್ತಾರೆ. ಕರ್ನಾಟಕ ಸರ್ಕಾರದಿಂದ ಪ್ರತಿವರ್ಷ ಅನುದಾನ ಮಂಜೂರಾಗಿದ್ದರೂ ಸಹ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಪರಿಷತ್ತಿನ ನಿಯಮ ನಿಬಂಧನೆಗಳನುಸಾರವಾಗಿ ನಡೆಸಲಾಗುತ್ತದೆ. ಅದಾಗ್ಯೂ ಸಹ ಪರಿಷತ್ತಿನ ಕಾರ್ಯಚಟುವಟಿಕೆಗಳು ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಬಗ್ಗೆ ಸರ್ಕಾರದೊಡನೆ ಸಮಾಲೋಚಿಸಿ ನಡೆಸಲಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಲೆಕ್ಕಪತ್ರ ವಿಭಾಗ, ಸಿಬ್ಬಂದಿ ಸೇವಾ ವಿಭಾಗ, ದತ್ತಿ ವಿಭಾಗ, ಕಾರ್ಯಕ್ರಮ ವಿಭಾಗ ('ಕನ್ನಡದ ಧ್ರುವತಾರೆ' ಸಾಧಕರೊಂದಿಗೆ ಮಾತುಕತೆ), ಪರೀಕ್ಷಾ ವಿಭಾಗ/ ಸಂಶೋಧನಾ ವಿಭಾಗ ಮತ್ತು ಶಾಸನಶಾಸ್ತ್ರ ವಿಭಾಗ, ಸದಸ್ಯತ್ವ ವಿಭಾಗ, ರಸೀತಿ ವಿಭಾಗ, ರವಾನೆ ವಿಭಾಗ, ದಾಸ್ತಾನು ವಿಭಾಗ, ಮಾರಾಟ ವಿಭಾಗ, ಪ್ರಕಟಣೆ ಮತ್ತು ಮಾಧ್ಯಮ ವಿಭಾಗ, ಗ್ರಂಥಾಲಯ ಮತ್ತು ವಾಚನಾಲಯ (ಸರಸ್ವತಿ ಭಂಡಾರ) ವಿಭಾಗ, ಬಿ.ಎಂ.ಶ್ರೀ ಅಚ್ಚುಕೂಟ ವಿಭಾಗ. ಈ ವಿಭಾಗಗಳು ಕೆಳಕಂಡಂತೆ ಕಾರ್ಯ ನಿರ್ವಹಿಸುತ್ತಿವೆ.

**೧. ಲೆಕ್ಕಪತ್ರ ವಿಭಾಗ, ಸಿಬ್ಬಂದಿ ಸೇವಾ ವಿಭಾಗ:**

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಸ್ಥೆಯು ದಿನಾಂಕ ೫.೫.೧೯೧೫ರಂದು ಸ್ಥಾಪನೆಗೊಂಡಿದ್ದು ಮೈಸೂರು ಸಂಸ್ಥಾನದ ಸಾರ್ವಜನಿಕ ಸಂಘಗಳ ಕಾನೂನಿನ ಮೇರೆಗೆ ರಿ.ನಂ. ೩೨೮:೧೯೧೫-೧೬ ದಿನಾಂಕ: ೦೨-೧೦-೧೯೧೫ರಲ್ಲಿ ನೋಂದಣಿ ಮಾಡಿಸಲ್ಪಟ್ಟಿರುತ್ತದೆ.

ಪ್ರಸ್ತುತ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಎಎಂಆರ್ ಸಂಖ್ಯೆ: ೫೬/೨೦೧೮-೧೯ ದಿನಾಂಕ: ೨೫-೦೨-೨೦೧೯ರ ಪ್ರಕಾರ ಒಪ್ಪಿಗೆ ಪಡೆದ ಪರಿಷತ್ತಿನ ಅಂಗರಚನೆಯ ಉಪನಿಯಮಗಳು ೩೬ (ಇ)ಅನ್ವಯ ಕೈಗೊಳ್ಳಲಾಗಿದ್ದು, ಪ್ರತಿ ಏಪ್ರಿಲ್ ಮಾಹೆಯ ೧ನೇ ತಾರೀಖಿನಿಂದ ಆ ಮುಂದಿನ ಮಾರ್ಚ್ ೩೧ರ ವರೆಗೆ ಇರುವ ಹಣಕಾಸಿನ ವರ್ಷ ಅಥವಾ ಸರ್ಕಾರ ಮಾರ್ಪಡಿಸಬಹುದಾದ ಹಣಕಾಸಿನ ವರ್ಷವನ್ನು ಆಡಳಿತ ವರ್ಷ ಎಂಬುದಾಗಿ ಪರಿಗಣಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆರ್ಥಿಕ ವಹಿವಾಟನ್ನು ಕೆನರಾ ಬ್ಯಾಂಕ್ ಉಳಿತಾಯ ಖಾತೆ, ಸ್ಟೇಟ್ ಬ್ಯಾಂಕ್ ಉಳಿತಾಯ ಖಾತೆ, ಕರ್ಣಾಟಕ ಬ್ಯಾಂಕ್ ಉಳಿತಾಯ ಖಾತೆ ಮತ್ತು ಅಪೆಕ್ಸ್ ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ನಡೆಸಲಾಗುತ್ತಿದೆ. ಪರಿಷತ್‌ನಲ್ಲಿ ಅಮೃತ ನಿಧಿ, ಕನ್ನಡ ನಿಧಿ, ಶತಮಾನೋತ್ಸವ ಶಾಶ್ವತ ನಿಧಿ, ಕನ್ನಡ ನುಡಿ ನಿಧಿ ಹೀಗೆ ಎಲ್ಲಾ ಠೇವಣಿಗಳ ಹಣವನ್ನು ಕ್ರೋಢೀಕರಿಸಿ 'ಕನ್ನಡ ಸಾಹಿತ್ಯ ಪರಿಷತ್ತಿನ ಶಾಶ್ವತ ನಿಧಿ' ಎಂದು ಪರಿಗಣಿಸಲಾಗಿದೆ. ಹಾಗೂ ಈ ಠೇವಣಿಯಲ್ಲಿನ ಬಡ್ಡಿ ಹಣದಲ್ಲಿ ಉದ್ದೇಶಿತ ಕಾರ್ಯಕ್ರಗಳಿಗೆ ಹಣವನ್ನು ಉಪಯೋಗಿಸಲಾಗುವುದು.

ಪ್ರತಿಸಾಲಿನ ಆಯ-ವ್ಯಯ ಅಂದಾಜು ಪಟ್ಟಿಯನ್ನು ತಯಾರಿಸಿ, ಹಣಕಾಸು ಸಲಹಾ ಸಮಿತಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುತ್ತದೆ. ನಂತರ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ

ಸ್ಥಿರೀಕರಣಕ್ಕಾಗಿ ಮಂಡಿಸಿ ಒಪ್ಪಿಗೆಯನ್ನು ಪಡೆಯಲಾಗುತ್ತದೆ. ಅಲ್ಲದೇ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

ಕರ್ನಾಟಕ ಸರ್ಕಾರದ ಆಯ-ವ್ಯಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಹಣವನ್ನು ಹಂಚಿಕೆ ಮಾಡಲಾಗುತ್ತದೆ. ೨೦೨೪-೨೫ನೇ ಸಾಲಿನ ಆಯ-ವ್ಯಯದಲ್ಲಿ ಸರ್ಕಾರದ ಆದೇಶದ ಲೆಕ್ಕ ಶೀರ್ಷಿಕೆ ೨೨೦೫-೦೦-೧೦೨-೪-೨೨-೧೦೩ ಅಡಿಯಲ್ಲಿ ರೂ. ೫೦೦.೦೦ ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಹಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕ ಶೀರ್ಷಿಕೆ ೨೨೦೫-೦೦-೧೦೨-೪-೨೨-೧೦೩-೫ ಅಡಿಯಲ್ಲಿ ಮೂರು ಹಂತಗಳಲ್ಲಿ ಸಾಹಿತ್ಯ ಪರಿಷತ್ತಿಗೆ ಅನುದಾನವನ್ನು ನೀಡಲಾಗುತ್ತದೆ. ಈ ಹಣದಲ್ಲಿ ಪರಿಷತ್ತಿನ ಸಿಬ್ಬಂದಿಗಳ ವೇತನ ಸೇರಿದಂತೆ, ಸಾಹಿತ್ಯ ಪರಿಷತ್ತಿನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರತಿವರ್ಷ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮಕ್ಕೆ ಸರ್ಕಾರದಿಂದ ಪ್ರತ್ಯೇಕವಾದ ಅನುದಾನ ಬಿಡುಗಡೆಯಾಗುತ್ತದೆ. ಸದರಿ ಅನುದಾನವನ್ನು ಸಮ್ಮೇಳನ ನಡೆಯುವ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಬಿಡುಗಡೆ ಮಾಡಲಾಗುತ್ತದೆ. ಈ ವರ್ಷದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ದಿನಾಂಕ: ೨೧, ೨೨ ಮತ್ತು ೨೩ರ ಡಿಸೆಂಬರ್ ೨೦೨೪ರಂದು ಆಯೋಜಿಸಲಾಗುವುದು ಎಂದು ತೀರ್ಮಾನಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆ್ಯಪ್ ತಂತ್ರಜ್ಞಾನ, ಅಂತರ್ಜಾಲ ತಾಣ ಮತ್ತು ಸಾಮಾಜಿಕ ಜಾಲತಾಣ ಇವುಗಳ ವಾರ್ಷಿಕ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, (ಕಿಯೋನಿಕ್ಸ್) ಈ ಸಂಸ್ಥೆಗೆ ನೀಡಲಾಗಿದೆ. ಸದರಿ ಸಂಸ್ಥೆಯವರು ನಿಯಮಾನುಸಾರ ಗುತ್ತಿಗೆ ಕರೆದು, **ಮೆ. ಸಲ್ಯೂಷನ್ಸ್ ಇನ್ಫಿನಿ** ಸಂಸ್ಥೆಯವರಿಗೆ ಉಪಗುತ್ತಿಗೆ ನೀಡಿ, ಪರಿಷತ್ತಿನ ಕೆಲಸವನ್ನು ನಿಯೋಜಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ರೇಸರ್ ಪೇ ಗೇಟ್‌ವೇ ಮುಖಾಂತರ ಸದಸ್ಯರ ಶುಲ್ಕವನ್ನು ಸ್ವೀಕರಿಸಿ ಪರಿಷತ್ತಿನ ಖಾತೆಗೆ ಜಮಾವಾಗುವುದು.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಪೂರ್ಣ ಹಣಕಾಸಿನ ವಹಿವಾಟನ್ನು ಖಾಸಗಿ ಲೆಕ್ಕ ಪರಿಶೋಧಕರಿಂದ ಆಂತರಿಕ ಲೆಕ್ಕ ತಪಾಸಣೆಯನ್ನು ಮಾಡಲಾಗುತ್ತದೆ. ಹಾಗೂ ಕರ್ನಾಟಕ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಲೆಕ್ಕ ಪರಿಶೋಧನೆ ಮಾಡಿಸಿ, ಲೆಕ್ಕ ಪರಿಶೋಧಿಸಿದ ವಾರ್ಷಿಕ ಲೆಕ್ಕದ ವಿವರವನ್ನು ಅನುಮೋದನೆಗಾಗಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗುತ್ತದೆ. ಪರಿಷತ್ತಿನ ಎಲ್ಲ ವಿಧದ ಹಣಕಾಸು ವ್ಯವಹಾರಗಳು ೧೯೬೧ರ ವರಮಾನ ತೆರಿಗೆ ಅಧಿನಿಯಮಕ್ಕೆ ಒಳಪಟ್ಟಿರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ ನಿಬಂಧನೆಗಳಲ್ಲಿನ ನಿಯಮ (೩೮)ರ ಉಪನಿಯಮ (ಅ) ಮತ್ತು (ಆ) ರಲ್ಲಿ ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**೩೮. ಅವಕಾಶಗಳು : (ಅ) ಪರಿಷತ್ತಿನ ಉದ್ದೇಶಗಳ ಈಡೇರಿಕೆಗಾಗಿ ಹಾಗೂ ವಿಶ್ವಸ್ಥ ಪತ್ರ (ಟ್ರಸ್ಟ್ ಡೀಡ್) ಸ್ಥಾಪಿಸಲು ಕಲಂ ೨(೧೫), ೧೧, ೧೨, ೧೩ ಮತ್ತು ೮೦(ಜಿ) ೧೯೬೧ರ ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಪರಿಷತ್ತಿಗೆ ಅನುಕೂಲವಾಗುವಂತೆ ಅಳವಡಿಸಿಕೊಳ್ಳತಕ್ಕದ್ದು. ಈ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ವಿನಾಯಿತಿಯನ್ನು ಪಡೆಯುವುದು.**

**ಆದಾಯ ತೆರಿಗೆ ಕಾಯ್ದೆ ೧೯೬೧ರ ಕಲಂ ೧೨ (ಎ)ರನ್ವಯ ಕನ್ನಡ ಸಾಹಿತ್ಯ ಪರಿಷತ್ತು ನೊಂದಣಿಯಾಗಿದ್ದು ಆದಾಯ ತೆರಿಗೆ ಇಲಾಖೆಯ ಪತ್ರ ಸಂಖ್ಯೆ : ಐಟಿಓ(ಟಿ)/ಸಿಇಆರ್‌ಟಿ/೩೯/೨೦೦೦-೨೦೦೧, ದಿನಾಂಕ: ೨೬-೦೪-೨೦೦೦ರಲ್ಲಿ ನಂ: ಟ್ರಸ್ಟ್/೭೧೮/ವಾಲ್ಯೂಮ್.ಎ-೨/ಕೆ೪೩/೧೯೭೩-೭೪, ದಿನಾಂಕ: ೨೭-೦೨-೧೯೭೪ರಲ್ಲಿ ನೊಂದಣಿಯಾಗಿರುವ ಆದೇಶದ ಪ್ರತಿಯನ್ನು ಈ ಕೆಳಗೆ ಅಳವಡಿಸಿದೆ.**

ಆದಾಯ ತೆರಿಗೆ ಕಾಯ್ದೆ, ೧೯೬೧ರ ಕಲಂ ೮೦ಜಿ(೫)(೬) ರನ್ನು ಅನುಮೋದಿಸಿರುವ ಆದಾಯ ತೆರಿಗೆ ಇಲಾಖೆಯ ಪತ್ರ ಸಂಖ್ಯೆ: ಡಿಐಟಿ(ಇ) ಬಿಎಲ್‌ಆರ್/೮೦ಜಿ(ಆರ್)೫೪/ಎಎಎಟಿಕೆ೨೭೭೭ಎಲ್/ಐಟಿಓ(ಇ)–೧/ವಾಲ್ಯೂಮ್ ೨೦೦೮–೨೦೦೯, ದಿನಾಂಕ: ೧೦–೦೭–೨೦೦೮ನ್ನು ಈ ಕೆಳಗೆ ಅಳವಡಿಸಿದೆ.

ಆದಾಯ ತೆರಿಗೆ ಇಲಾಖೆಯಿಂದ ಫಾರಂ ನಂ: ೧೦ಎಸಿ ಅಡಿಯಲ್ಲಿ ದಿನಾಂಕ: ೦೪–೦೪–೨೦೨೨ರಂದು ಅನುಮೋದಿತಗೊಂಡು ಎವೈ ೨೦೨೨–೨೩ ರಿಂದ ಎವೈ ೨೦೨೬–೨೭ರ ವರೆಗೆ ಆದಾಯ ತೆರಿಗೆ ಪ್ರಕರಣ ೮೦ಜಿ ಉಪಪ್ರಕರಣ–೫, ೧೧–ಕ್ಲಾಸ್(ಐ)ರ ಅಡಿಯಲ್ಲಿ ಅನುಮತಿ ನೀಡಿರುವ ಪತ್ರದ ಪ್ರತಿಯನ್ನು ಈ ಕೆಳಗೆ ಅಳವಡಿಸಿದೆ.

6

Commissioner of Income Tax,
Karnataka-II, C.R. Building,
Queen's Road, Bangalore 560 001

Dated : 26-04-2000

TO WHOMSOEVER IT MAY CONCERN

*This is to certify that* Kannada Sahitya parishat, Pampa Maha Kavi Road, Chamarajpet, Bangalore-18 *has been Registered under Section 12A of the Income-tax Act, 1961, vide No. Trust/718/ Vol.* A-II / K-43 / 1973-74 *dated* 27-02-74 *as per our Register (Volume* A-II *) of this office.*

Income Tax Officer Trust Circle Ward Bangalore-1

(B.V. SUBBARAYA) 26/4/2000
Income tax Officer, Trust Ward 3(1)
for Commissioner of Income Tax,
Karnataka-II, Bangalore.

ದೃಢೀಕರಿಸಿದೆ

**OFFICE OF THE**
**DIRECTOR OF INCOME-TAX (EXEMPTIONS)**
**C.R. BUILDING, 3rd Floor, Queen's Road, BANGALORE - 560 001**

No: **DIT(E)BLR/80G(R)/54/AAATK2777L/ITO(E)-1/Vol 2008-2009** **Date : 10/07/2008**

## APPROVAL UNDER SECTION 80G(5)(vi) OF THE INCOME TAX ACT, 1961

Name : **Kannada Sahithya Parishath**

Address : Pampa Mahakavi Road, Chamarajpet, Bangalore.
Bangalore, Karnataka, 560018,

On verification of the application filed on **09/01/2008** by the above applicant and other details and documents submitted, it is seen that the trust/institution has been Registered under section 12A of the Income-tax Act, 1961 vide Registration No.**TRUST/718/VOL.A-II/K-43/1973-74** dated **27/02/1974** and the applicant satisfies the conditions referred to in section 80G(5)(vi) of the Income tax Act 1961. In view of the above, approval is granted u/s 80G(5)(vi) of the I.T.Act 1961 for the period from **01/04/2008** to **31/03/2011**, subject to the following conditions :

1. The donations made to the above Institution/Fund are deductible under section 80G(2)(iv) r.w.s. 80G(5)(vi) of the Income-tax Act, 1961 in the hands of the donors subject to the limits prescribed therein.

2. The grant of approval is further subject to the following conditions:
   - i) The donee institution/Fund shall forfeit this benefit provided under the law, if any of the conditions stated herein is not complied with or in any way violated.
   - ii) The Institution/Fund shall maintain its accounts regularly and also get them audited in accordance with sec.80G (5) (iv) read with section 12A (b) and 12A(c) and submit the same along with the return of income before the Assessing Officer within the due date as per the requirements of section 139(1) read with section 139(4A) of the Income Tax Act 1961
   - iii) The Institution/Fund must issue serially numbered and dated receipts to the donors for the donations (voluntary contributions) received, duly signed by any one of the Trustees or their authorized persons. Such receipts shall bear the PAN number of the trust, number and date of this order, and the period of its validity. The name and address of the donor must also be clearly mentioned on the receipt.
   - iv) This approval to the Institution/Fund shall apply to the donations received only if the Institution/Fund is established in India for charitable purposes, and fulfills the conditions laid down in section 80G(5)(i), (ii), (iii), (iv) & (v), 80G(5A), 80G(5B) and 80G(5C) of the Income-tax Act.
   - v) The Institution/Fund should not issue receipts allowing any benefit under this section to any person if the amount so received is in lieu of any goods, benefit or services rendered directly or indirectly by the Institution/Fund to such person.
   - vi) It is advised that the Institution/Fund prominently displays its name and address, and 80G recognition certificate number at the place where its charitable activities are carried on. If there is any change in the address, the same should be intimated to the undersigned as well as to the Assessing Officer.

sd/-
**(ASHUTOSH CHANDRA)**
**Director of Income-Tax (Exemptions),**
**Bangalore.**

**(A.V. SHAHAPUR)**
**Income-Tax Officer (Exemptions)-1,**
**for Director of Income-Tax (Exemptions),**
**Bangalore.**

Copy To :
1) The Applicant.
2) The Assessing Officer

ದೃಢೀಕರಿಸಿದೆ

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

# FORM NO. 10AC

(See rule 17A/11AA/2C)

Order for approval

| | | |
|---|---|---|
| 1 | PAN | AAATK2777L |
| 2 | Name | KANNADA SAHITHYA PARISHAT |
| 2a | Address | |
| | Flat/Door/Building | No.00 |
| | Name of premises/Building/Village | Pampa Mahakavi Road, Chamarajpet |
| | Road/Street/Post Office | Chamrajpet S.O (Bangalore) |
| | Area/Locality | Bangalore South |
| | Town/City/District | BANGALORE |
| | State | Karnataka |
| | Country | INDIA |
| | Pin Code/Zip Code | 560018 |
| 3 | Document Identification Number | AAATK2777LF2021701 |
| 4 | Application Number | 423107350250322 |
| 5 | Unique Registration Number | AAATK2777LF20217 |
| 6 | Section/sub-section/clause/sub-clause/proviso in which approval is being granted | 11-Clause (i) of first proviso to sub-section (5) of section 80G |
| 7 | Date of approval | 04-04-2022 |
| 8 | Assessment year or years for which the trust or institution is approved | From AY 2022-23 to AY 2026-2027 |
| 9 | Order for approval: | |
| | a. After considering the application of the applicant and the material available on record, the applicant is hereby granted approval with effect from the assessment year mentioned at serial no 8 above subject to the conditions mentioned in row number 10 . | |
| | b. The taxability, or otherwise, of the income of the applicant would be separately considered as per the provisions of the Income Tax Act, 1961. | |
| | c. This order is liable to be withdrawn by the prescribed authority if it is subsequently found that the activities of the applicant are not genuine or if they are not carried out in accordance with all or any of the conditions subject to which it is granted, if it is found that the applicant has obtained the approval by fraud or misrepresentation of facts or it is found that the assessee has violated any condition prescribed in the Income Tax Act, 1961. | |
| 10 | Conditions subject to which approval is being granted | |
| | The approval is granted subject to the following conditions:- | |

| | | |
|---|---|---|
| | a. No change in the deed of the applicant trust/society/non profit company or any of its bye-laws shall be affected without the due procedure of law and the approval of the Competent Authority as per provisions of law and its intimation shall be given immediately to Office of the Jurisdictional Commissioner of Income Tax and to the Assessing Officer. | |
| | b. Any change in the trustees or address of the applicant trust/society/non-profit company shall be intimated forthwith to Office of the Jurisdictional Commissioner of Income Tax and to the Assessing Officer. | |
| | c. The applicant trust/society/non profit company shall maintain its accounts regularly and also get them audited as per the provisions of section 80G(5)(iv) read with section 12A(1)(b)/10(23C) of the Income Tax Act,1961. | |
| | d. Certificate of donation shall be issued to the donor in form no 10BE, as per the provisions of rule 18AB. | |
| | e. No cess or fee or any other consideration shall be received in violation of section 2(15) of the Income Tax Act, 1961. | |
| | f. The trust/society/non profit company shall file the return of income of its trust/society/non profit company as per the provisions of section 139(1)/(4A)/(4C) of the Income Tax Act, 1961. | |
| | g. The approval granted through this order shall apply to the donations received only if the applicant trust/society/non profit company, established in India for charitable purpose, fulfills the conditions laid down in section 80G(5) of the Income Tax Act, 1961 and the religious expenditure does not exceed the limit specified in section 80G(5B) of the said Act. | |
| | h. If the applicant trust/ society/ non-profit company derives any income, being profits and gains of business, it shall maintain separate books of account in respect of such business as provided in section 80G(5)(i) of the Income Tax Act,1961. Further, any donation received by the applicant shall not be used, directly or indirectly, for the purposes of such business and a certificate shall be issued to every person making a donation to the effect that the applicant maintains separate books of account in respect of the business and the donation received by it will not be used, directly or indirectly, for the purpose of the business. | |
| | i. The applicant shall comply with the provisions of the Income Tax Act, 1961 read with the Income Tax Rules, 1962. | |
| | j. The approval and the Unique registration number has been instantly granted and if, at any point of time, it is noticed that form for approval has not been duly filled in by not providing, fully or partly, or by providing false or incorrect information or documents required to be provided under sub-rule (1) or (2) of rule 11AA or by not complying with the requirements of sub- rule (3) or (4) of the said rule, the approval and Unique Registration Number (URN), shall be cancelled and the approval and URN shall be deemed to have never been issued or granted. | |
| | Name and Designation of the Approving Authority | Principal Commissioner of Income Tax/ Commissioner of Income Tax<br><br>(Digitally signed) |

Digitally signed by
SIBICHEN K MATHEW
Date: 202[illegible].04
22:10:27 IST

(ಆ) **ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಮೇಲ್ಕಂಡ ೩೮ (ಅ) ರ ಅನುಗುಣವಾಗಿ ಪರಿಷತ್ತಿನ ಮೂಲಸ್ವರೂಪವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ."**

## ೨. ಸದಸ್ಯತ್ವ ವಿಭಾಗ:

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ ನಿಬಂಧನೆಗಳಲ್ಲಿನ ನಿಯಮ (೬), (೭) ಮತ್ತು (೮)ರಲ್ಲಿ ಪರಿಷತ್ತಿನ ಸದಸ್ಯತ್ವ, ಸದಸ್ಯತ್ವ ಪಡೆಯುವ ಪ್ರಕ್ರಿಯೆ ಹಾಗೂ ಸದಸ್ಯರ ಮತ್ತು ಸದಸ್ಯ ಸಂಸ್ಥೆಗಳ ಹಕ್ಕು–ಬಾಧ್ಯತೆಗಳು ಹಾಗೂ ಸೌಲಭ್ಯಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಲಾಗಿದೆ.

**ನಿಯಮ (೬). ಪರಿಷತ್ತಿನ ಸದಸ್ಯತ್ವ : (೧) ಪರಿಷತ್ತಿನ ಧ್ಯೇಯೋದ್ದೇಶಗಳನ್ನು ಒಪ್ಪಿಕೊಂಡು ಅದರ ನಿಯಮ–ನಿಬಂಧನೆಗಳಿಗೆ ಬದ್ಧರಾಗುವ ಕನ್ನಡ ಸಂಸ್ಥೆಗಳು ಹಾಗೂ** ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಮತ್ತು **ಕೆಳ ಕಾಣಿಸಿದ ಅರ್ಹತೆಯುಳ್ಳವರು** ಪರಿಷತ್ತಿನ ಸದಸ್ಯತ್ವ ಪಡೆಯಬಹುದು.

೧) **ಈ ನಿಯಮದ ಅಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹೊರಡಿಸಿರುವ ಧ್ಯೇಯೋದ್ದೇಶಗಳು (ಜ್ಞಾಪನಾ ಪತ್ರ) ದಲ್ಲಿ ಸೂಚಿಸಿರುವ ಕ್ರಮ ಸಂಖ್ಯೆ ೧, ೨, ೩. (೪) ರಿಂದ (೫) ರವರೆಗಿನ ಅಂಶಗಳು ಅನ್ವಯವಾಗುತ್ತದೆ**

( **ಕರ್ನಾಟಕ** ಸರ್ಕಾರದ ಸಹಕಾರ ಇಲಾಖೆಯ "ಸಂಘಗಳ ಜಿಲ್ಲಾ ನೋಂಧಣಾಧಿಕಾರಿಗಳು" , ಬೆಂಗಳೂರು ನಗರ ಜಿಲ್ಲೆ, ಇವರ "ತಿದ್ದುಪಡಿ ಅನುಮೋದನೆ ಪತ್ರ" ಸಂಖ್ಯೆ: ಎಎಂಆರ್ ಸಂಖ್ಯೆ:12/2023-24 ದಿನಾಂಕ:31-10-2023 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ/ಸೇರಿಸಲಾಗಿದೆ.)

(ಅ) ೧೮ ವರ್ಷಗಳ **ವಯಸ್ಸನ್ನು ಪೂರ್ಣಗೊಳಿಸಿದವರು.**

(ಆ) ***ವಿದ್ಯಾರ್ಹತೆ : ಕನ್ನಡ ವಿಷಯವನ್ನು ಒಳಗೊಂಡಂತೆ ಕನಿಷ್ಠ ಪ್ರಾಥಮಿಕ ಶಿಕ್ಷಣ ಪಡೆದ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಅಥವಾ ಸದಸ್ಯತ್ವ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪರಿಷತ್ತು ನಡೆಸುವ 'ಸರಳ ಕನ್ನಡ ಪರೀಕ್ಷೆ'ಯಲ್ಲಿ ಉತ್ತೀರ್ಣರಾದವರು. ಈ ಪರೀಕ್ಷೆಯ ಸಂಬಂಧವಾಗಿ ಕೇಂದ್ರ ಪರಿಷತ್ತಿನ ಪಠ್ಯಪುಸ್ತಕ ರಚನಾ ಸಮಿತಿಯು ಸೂಕ್ತ ಪಠ್ಯಕ್ರಮ ಹಾಗೂ ನಿಯಮಗಳನ್ನು ರಚಿಸತಕ್ಕದ್ದು. ಕನ್ನಡ ಓದು–ಬರಹ ಬಾರದ ವ್ಯಕ್ತಿಗಳು ಈಗಾಗಲೇ ಆಜೀವ ಸದಸ್ಯರಾಗಿದ್ದಲ್ಲಿ, ಅಂತಹವರ ಸದಸ್ಯತ್ವ ಅಬಾಧಿತವಾಗಿ ಮುಂದುವರೆಯತಕ್ಕದ್ದು.**

**<u>ವಿದ್ಯಾರ್ಹತೆಯಿಂದ ವಿನಾಯಿತಿ</u> : ಜಾನಪದ, ನೃತ್ಯ, ಸಂಗೀತ, ರಂಗಭೂಮಿ, ಚಿತ್ರರಂಗ, ಚಿತ್ರಕಲೆ, ಯಕ್ಷಗಾನ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕಲಾವಿದರು, ಕೃಷಿಕರು, ಕುಶಲ ಕರ್ಮಿಗಳು, ಕಾರ್ಮಿಕರು, ಇನ್ನಿತರೆ ಸಾಮಾನ್ಯ ವ್ಯಕ್ತಿಗಳು ಹಾಗೂ ಕನ್ನಡ ನಾಡು, ನುಡಿ, ನೆಲ, ಜಲ – ಇವುಗಳ ರಕ್ಷಣೆಗಾಗಿ ಶ್ರಮಿಸಿದ ಓದು, ಬರಹ ಬಾರದ ಕನ್ನಡಿಗರು, ಪರಿಷತ್ತಿನ ಸದಸ್ಯತ್ವವನ್ನು ಬಯಸಿ ಅರ್ಜಿ ಸಲ್ಲಿಸಿದಲ್ಲಿ, ಕನಿಷ್ಠ ವಿದ್ಯಾರ್ಹತೆಯ ಈ ನಿಯಮ ಅನ್ವಯವಾಗತಕ್ಕದ್ದಲ್ಲ. ಈ ವಿನಾಯಿತಿಯ ಸಂಬಂಧವಾಗಿ ಸೂಕ್ತ ಉಪನಿಯಮಗಳನ್ನು / ಉಪ ಸಮಿತಿಯನ್ನು ರಚಿಸುವ ಅಧಿಕಾರ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.**

(ಇ) **ಸದಸ್ಯತ್ವ ಬಯಸುವ ವ್ಯಕ್ತಿ, ತನ್ನ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಅಪರಾಧಿಕ ಪ್ರಕರಣ** ವಿಚಾರಣೆಗೆ ಬಾಕಿ ಇರುವುದಿಲ್ಲ ಎಂಬುದಾಗಿ **ಸ್ವ–ಘೋಷಿತ ಪ್ರಮಾಣ ಪತ್ರವನ್ನು** ಸಲ್ಲಿಸತಕ್ಕದ್ದು. ಆದರೆ, ಇಂತಹ ವ್ಯಕ್ತಿ ಕನ್ನಡ ನಾಡು, ನುಡಿ, ನೆಲ, ಜಲ ಇವುಗಳ ರಕ್ಷಣೆಯ ಸಂಬಂಧವಾಗಿ ಜರುಗಿದ **ಹೋರಾಟಗಳಲ್ಲಿ ಭಾಗಿಯಾಗಿದ್ದನೆನ್ನುವ ಕಾರಣಕ್ಕಾಗಿ, ಅಂತಹ ಅಪರಾಧಿಕ ಪ್ರಕರಣ** ದಾಖಲಾಗಿದ್ದರೆ ಈ ನಿಯಮ **ಅನ್ವಯಿಸುವುದಿಲ್ಲ.** ಈ ಸಂಬಂಧ ಸೂಕ್ತ ದಾಖಲೆಯನ್ನು ಒದಗಿಸತಕ್ಕದ್ದು.

(ಈ) **ಸದಸ್ಯತ್ವದ ಅರ್ಜಿಯೊಂದಿಗೆ ಸ್ವಯಂ** ದೃಢೀಕರಿಸಿದ **ಆಧಾರ್ ಕಾರ್ಡ್ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು** ಸಲ್ಲಿಸತಕ್ಕದ್ದು.

(ಉ) **ಮತದಾರರ ಹೆಸರಿಗೆ ಆಧಾರ್ ಕಾರ್ಡ್ ಜೋಡಣೆ** ಮಾಡುವ ಸಂಬಂಧವಾಗಿ **ಕಾನೂನು ಜಾರಿಗೆ ಬಂದಲ್ಲಿ, ಅದರನ್ವಯ ಅದು ಜಾರಿಗೆ ಬಂದ ದಿನಾಂಕದಂದು ಇರುವ ಪರಿಷತ್ತಿನ ಸದಸ್ಯರಿಗೆ ನೀಡುವ ಗುರುತಿನ ಚೀಟಿ 'ಸ್ಮಾರ್ಟ್ ಕಾರ್ಡ್'ಗೆ ಆಧಾರ್ ಕಾರ್ಡ್ ಸಂಖ್ಯೆಯನ್ನು ಜೋಡಣೆ ಮಾಡತಕ್ಕದ್ದು.**

(ಊ) ಪರಿಷತ್ತಿನ ಧ್ಯೇಯೋದ್ದೇಶಗಳನ್ನು ಒಪ್ಪಿಕೊಂಡು ಅದರ ನಿಯಮ–ನಿಬಂಧನೆಗಳಿಗೆ ಬದ್ಧವಾಗುವ ಯಾವುದೇ ಕನ್ನಡ ಸಂಘ–ಸಂಸ್ಥೆ, ಪರಿಷತ್ತಿನ ಅಂಗಸಂಸ್ಥೆಯಾಗಲು ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಯೊಂದಿಗೆ ಸಂಸ್ಥೆಯ ನೋಂದಣಿ ಪತ್ರ ಮತ್ತು ಸಂಸ್ಥೆಯು ಅಂಗೀಕರಿಸಿದ ನಡೆವಳಿಯ ದೃಢೀಕೃತ ಪ್ರತಿಗಳನ್ನು ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಿ ಸದಸ್ಯತ್ವ ಪಡೆಯಬಹುದು. ಅಂತಹ ಸಂಸ್ಥೆಯು ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಗೊಂಡಿರದಿದ್ದಲ್ಲಿ ಪರಿಷತ್ತಿನ ಸದಸ್ಯತ್ವ ಪಡೆಯಬಹುದಾದರೂ ಅದು ಯಾವುದೇ ಚುನಾವಣೆಯಲ್ಲೂ ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ.

(೨) ಪರಿಷತ್ತಿನ ಸದಸ್ಯರ ವರ್ಗಗಳು, ಅವರು ಸಲ್ಲಿಸಬೇಕಾದ ಶುಲ್ಕ :

| | |
|---|---|
| ಅ) ಮಹಾ ಪೋಷಕರು | ರೂ. ೧,೦೦,೦೦೦/– (ಒಂದು ಲಕ್ಷ) |
| (ಆ) ಪೋಷಕರು | ರೂ. ೫೦,೦೦೦/– (ಐವತ್ತು ಸಾವಿರ) |
| (ಇ) ಆಜೀವ ಸದಸ್ಯರು | ರೂ. ೨೫೦/– (ಇನ್ನೂರ ಐವತ್ತು) |
| (ಈ) ಮಹಾ ಪೋಷಕ ಸಂಸ್ಥೆಗಳು | ರೂ. ೨,೦೦,೦೦೦/– (ಎರಡು ಲಕ್ಷ) |
| (ಉ) ಪೋಷಕ ಸಂಸ್ಥೆಗಳು | ರೂ. ೧,೦೦,೦೦೦/– (ಒಂದು ಲಕ್ಷ) |
| (ಊ) ದಾನಿ ಸಂಸ್ಥೆಗಳು | ರೂ. ೨೫,೦೦೦/– (ಇಪ್ಪತ್ತೈದು ಸಾವಿರ) |
| **(ಋ) ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿ ಇರುವ ಸಂಘ–ಸಂಸ್ಥೆ** | ರೂ. ೫,೦೦೦/– (ಐದು ಸಾವಿರ) |
| (ಎ) ಭಾರತೀಯ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ / ನಿವೃತ್ತರಾಗಿರುವ ಕನ್ನಡ ಸೈನಿಕರಿಗೆ ಹಾಗೂ ದಿವ್ಯಾಂಗಚೇತನರಿಗೆ ಆಜೀವ ಸದಸ್ಯತ್ವವನ್ನು ಮತ್ತು ಸ್ಮಾರ್ಟ್‌ಕಾರ್ಡನ್ನು ಶುಲ್ಕರಹಿತ(ಉಚಿತ)ವಾಗಿ ನೀಡತಕ್ಕದ್ದು. | |
| (ಏ) ಹೊರದೇಶದ ಕನ್ನಡಿಗರು ಅಮೆರಿಕದ ಹತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು ಆಜೀವ ಸದಸ್ಯತ್ವದ ಶುಲ್ಕವಾಗಿ ಪಾವತಿಸತಕ್ಕದ್ದು. ------------------------------------------------------------ | |
| *(ಐ)* ಕರ್ನಾಟಕ ರಾಜ್ಯ / ಗಡಿರಾಜ್ಯ / ಹೊರರಾಜ್ಯಗಳಲ್ಲಿರುವ ಯಾವುದೇ ಕನ್ನಡ ಸಂಘ–ಸಂಸ್ಥೆಯು ಪರಿಷತ್ತಿನ ಅಂಗಸಂಸ್ಥೆಯಾಗಲು ರೂ. ೧೦,೦೦೦/– (ಹತ್ತು ಸಾವಿರ ರೂಪಾಯಿ)ಗಳನ್ನು ಶುಲ್ಕವಾಗಿ ಪಾವತಿಸತಕ್ಕದ್ದು.* ------------------------------------------------------------ | |
| *(ಒ)* ಯಾವುದೇ ವಿದೇಶದಲ್ಲಿರುವ ಕನ್ನಡ ಸಂಘ–ಸಂಸ್ಥೆಯು ಪರಿಷತ್ತಿನ ಅಂಗಸಂಸ್ಥೆಯಾಗಲು ಬಯಸಿದ್ದಲ್ಲಿ ಅಮೆರಿಕದ ಐವತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು, ಅಥವಾ ಪರಿಷತ್ತಿನ ಕಾರ್ಯಕಾರಿ ಸಮಿತಿ ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು, ಶುಲ್ಕವಾಗಿ ಪಾವತಿಸತಕ್ಕದ್ದು.* | |

**೧) ನಿಯಮ ಸಂಖ್ಯೆ ೬(೨) ,(ಊ)ರಲ್ಲಿ 'ಸದಸ್ಯ' ಎಂಬ ಪದವನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.**

**೨) ನಿಯಮ ಸಂಖ್ಯೆ ೬(೨)ರಲ್ಲಿ (ಐ) ಮತ್ತು (ಒ) ಉಪ ನಿಯಮಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.**

( **ಕರ್ನಾಟಕ** ಸರ್ಕಾರದ ಸಹಕಾರ ಇಲಾಖೆಯ "ಸಂಘಗಳ ಜಿಲ್ಲಾ ನೋಂಧಣಾಧಿಕಾರಿಗಳು" , ಬೆಂಗಳೂರು ನಗರ ಜಿಲ್ಲೆ, ಇವರ "ತಿದ್ದುಪಡಿ ಅನುಮೋದನೆ ಪತ್ರ" ಸಂಖ್ಯೆ: ಎಎಂಆರ್ ಸಂಖ್ಯೆ:12/2023-24 ದಿನಾಂಕ:31-10-2023 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ/ಸೇರಿಸಲಾಗಿದೆ.)

೧) ( ಮಹಾಪೋಷಕರು, ಪೋಷಕರು ಹಾಗೂ ಮಹಾಪೋಷಕ ಸಂಸ್ಥೆ / ಪೋಷಕ ಸಂಸ್ಥೆಯ ಪ್ರತಿನಿಧಿಯೊಬ್ಬರಿಗೆ, ದಾನಿಗಳಿಗೆ, ದಾನಿ ಸಂಸ್ಥೆಗಳ ಪ್ರತಿನಿಧಿಯೊಬ್ಬರಿಗೆ) ಅನ್ವಯವಾಗುತ್ತದೆ

**ನಿಯಮ (೭). ಸದಸ್ಯತ್ವ ಪಡೆಯುವ ಪ್ರಕ್ರಿಯೆ :** (೧)ಸದಸ್ಯತ್ವ ಪಡೆಯಬಯಸುವ ಆಯಾ ವರ್ಗಗಳ ವ್ಯಕ್ತಿಗಳು ಹಾಗೂ ಸಂಸ್ಥೆಗಳು ನೇರವಾಗಿ, ಪರಿಷತ್ತಿನ ಜಾಲತಾಣ (ವೆಬ್‌ಸೈಟ್) / ಮೊಬೈಲ್ ಆ್ಯಪ್ / ಕೇಂದ್ರ ಪರಿಷತ್ತಿನ ಕಚೇರಿಯಲ್ಲಿ ನಿಗದಿ ಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿ ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸತಕ್ಕದ್ದು. ಇಂತಹ ಅರ್ಜಿಯನ್ನು ಹಾಗೂ ದಾಖಲೆಗಳನ್ನು ಪರಿಷತ್ತು ಪರಿಶೀಲಿಸಿದ ಅನಂತರ ಸದಸ್ಯತ್ವವನ್ನು ನೀಡಲಾಗುವುದು.

***(ಅ)* ಆನ್‌ಲೈನ್ ಮೂಲಕ ಸದಸ್ಯತ್ವ ಪಡೆಯುವವರು ಸದಸ್ಯತ್ವ ಶುಲ್ಕ ಹಾಗೂ ಸ್ಮಾರ್ಟ್‌ಕಾರ್ಡ್ ವೆಚ್ಚದ ಮೊತ್ತದ ಜೊತೆಗೆ, ಪೇಮೆಂಟ್ ಗೇಟ್‌ವೇ ಸಂಸ್ಕರಣಾ ಶುಲ್ಕ ಹಾಗೂ ಜಿ.ಎಸ್.ಟಿ. ಮತ್ತು ಇತರೆ ತೆರಿಗೆ ಸೇರಿದಂತೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು ಪಾವತಿಸತಕ್ಕದ್ದು.***

***(ಆ)* ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡಿ ಸದಸ್ಯತ್ವ ಶುಲ್ಕವನ್ನು ಪಾವತಿಸಲು ಅನುಕೂಲವಿಲ್ಲದ ವ್ಯಕ್ತಿಗಳು, ಮುದ್ರಿತ ಸದಸ್ಯತ್ವ ಅಪೇಕ್ಷಾ ಪತ್ರಕ್ಕೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಶುಲ್ಕವನ್ನು ಪಾವತಿಸಿ, ಮುದ್ರಿತ ಅರ್ಜಿಯನ್ನು ಪಡೆದುಕೊಂಡು ವಿವರಗಳನ್ನು ಭರ್ತಿ ಮಾಡಿ ಸಲ್ಲಿಸಬಹುದಲ್ಲದೆ, ಸದಸ್ಯತ್ವ ಶುಲ್ಕವನ್ನು ನಗದಾಗಿ / ಬ್ಯಾಂಕ್ ಡ್ರಾಫ್ಟ್ / ಮನಿ ಆರ್ಡರ್ ಮೂಲಕ ಪಾವತಿಸಬಹುದು.***

**೧)* ನಿಯಮ ಸಂಖ್ಯೆ ೭(೧)ರಲ್ಲಿ (ಅ) ಮತ್ತು (ಆ)ಗಳನ್ನು ಹಾಗೂ ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.**

(೨) ***ನಿಯಮ ೭ರ ಈ ಉಪನಿಯಮಗಳು ಪೂರ್ವಾನ್ವಯವಾಗಿ ದಿನಾಂಕ ೧೨-೦೬-೨೦೨೩ ರಿಂದಲೇ ಜಾರಿಗೆ ಬರಲಾಗಿವೆ ಎಂದು ಭಾವಿಸತಕ್ಕದ್ದು.***

( **ಕರ್ನಾಟಕ** ಸರ್ಕಾರದ ಸಹಕಾರ ಇಲಾಖೆಯ "ಸಂಘಗಳ ಜಿಲ್ಲಾ ನೋಂಧಣಾಧಿಕಾರಿಗಳು" , ಬೆಂಗಳೂರು ನಗರ ಜಿಲ್ಲೆ, ಇವರ "ತಿದ್ದುಪಡಿ ಅನುಮೋದನೆ ಪತ್ರ" ಸಂಖ್ಯೆ: ಎಎಂಆರ್ ಸಂಖ್ಯೆ:12/2023-24 ದಿನಾಂಕ:31-10-2023 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ/ಸೇರಿಸಲಾಗಿದೆ.)

(೨) **ಆಯಾ ವರ್ಗಗಳಿಂದ ಸ್ವೀಕೃತವಾಗುವ ಸದಸ್ಯತ್ವ** ಶುಲ್ಕವನ್ನು 'ಸ್ಥಾಯಿನಿಧಿ'ಗೆ ವರ್ಗಾಯಿಸತಕ್ಕದ್ದು.

(೩) **ಈಗಾಗಲೇ ಸದಸ್ಯತ್ವ ಪಡೆದು ಗುರುತಿನ ಚೀಟಿ ಹೊಂದಿದವರು ಅಪೇಕ್ಷಿಪಟ್ಟಲ್ಲಿ ಮಾತ್ರ ಹಾಗೂ ಹೊಸದಾಗಿ ಸದಸ್ಯತ್ವ ಪಡೆಯುವವರು ಆಧುನಿಕ ಗುರುತಿನ ಚೀಟಿ** 'ಸ್ಮಾರ್ಟ್‌ಕಾರ್ಡ್'ನ್ನು ಕಡ್ಡಾಯವಾಗಿ **ಪಡೆಯತಕ್ಕದ್ದು. ಈ ಸಂಬಂಧ ರೂ. ೧೫೦-೦೦ (ಒಂದುನೂರ ಐವತ್ತು ರೂಪಾಯಿ)ಗಳನ್ನು ಹೆಚ್ಚುವರಿಯಾಗಿ (ಸ್ಮಾಟ್‌ಕಾರ್ಡ್ ವೆಚ್ಚ ಮತ್ತು ಅಂಚೆ ವೆಚ್ಚ ಸೇರಿ) ಪಾವತಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಸ್ಮಾರ್ಟ್‌ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ.**

***(ಅ)* ಈಗಾಗಲೇ ಪರಿಷತ್ತಿನ ಸದಸ್ಯತ್ವವನ್ನು ಹೊಂದಿರುವವರು ಸ್ಮಾರ್ಟ್‌ಕಾರ್ಡ್ ಪಡೆಯಲು ಇಚ್ಛಿಸಿದ್ದಲ್ಲಿ, ಸ್ಮಾರ್ಟ್‌ಕಾರ್ಡ್ ವೆಚ್ಚ ರೂ. ೧೫೦-೦೦ ಗಳೊಂದಿಗೆ ಪೇಮೆಂಟ್ ಗೇಟ್‌ವೇ ಸಂಸ್ಕರಣಾ ಶುಲ್ಕ ಹಾಗೂ ಜಿ.ಎಸ್.ಟಿ. ಮತ್ತು ಇತರೆ ತೆರಿಗೆ ಸೇರಿದಂತೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು ಪಾವತಿಸತಕ್ಕದ್ದು.***

***(ಆ)* ನಿಯಮ ೭ರ ಉಪನಿಯಮ ೧(ಅ), (ಆ) ಹಾಗೂ ೩(ಅ)ಗಳ ಪೂರ್ವಾನ್ವಯ ಜಾರಿ : ಪ್ರಸ್ತಾಪಿತ ತಿದ್ದುಪಡಿಗಳು ನೋಂದಣಿಗೊಂಡ ನಂತರವೇ ಜಾರಿಗೊಳ್ಳುವುದರಿಂದ, ಪರಿಷತ್ತಿನ ಸದಸ್ಯತ್ವದ ಅಭಿಯಾನವನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ನಿಯಮ ೭ರ ಈ ಉಪನಿಯಮಗಳು ಪೂರ್ವಾನ್ವಯವಾಗಿ ದಿನಾಂಕ ೧೨-೦೬-೨೦೨೩ ರಿಂದಲೇ ಜಾರಿಗೆ ಬರಲಾಗಿವೆ ಎಂದು ಭಾವಿಸತಕ್ಕದ್ದು.***

*** ನಿಯಮ ಸಂಖ್ಯೆ ೭(೩)ರಲ್ಲಿ (ಅ) ಮತ್ತು (ಆ)ಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ**

( **ಕರ್ನಾಟಕ** ಸರ್ಕಾರದ ಸಹಕಾರ ಇಲಾಖೆಯ "ಸಂಘಗಳ ಜಿಲ್ಲಾ ನೋಂಧಣಾಧಿಕಾರಿಗಳು" , ಬೆಂಗಳೂರು ನಗರ ಜಿಲ್ಲೆ, ಇವರ "ತಿದ್ದುಪಡಿ ಅನುಮೋದನೆ ಪತ್ರ" ಸಂಖ್ಯೆ: ಎಎಂಆರ್ ಸಂಖ್ಯೆ:12/2023-24 ದಿನಾಂಕ:31-10-2023 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ/ಸೇರಿಸಲಾಗಿದೆ.).

(೪) **ಪರಿಷತ್ತಿನಿಂದ ಪ್ರಕಟಣೆಗೊಳ್ಳುತ್ತಿರುವ 'ಕನ್ನಡ ನುಡಿ' ಪತ್ರಿಕೆಯನ್ನು ಎಲ್ಲ ಸದಸ್ಯರುಗಳು ಉಚಿತವಾಗಿ ಆ್ಯಪ್ / ಜಾಲತಾಣದ ಮೂಲಕ ಪಡೆಯಬಹುದು. ಅದರ ಮುದ್ರಿತ ಪ್ರತಿ ಬಯಸುವವರಿಗೆ ಅದನ್ನು ಮುದ್ರಿಸಿ ಒದಗಿಸುವ ಸಾಧ್ಯತೆಯ ಸಂಬಂಧವಾಗಿ ಹಾಗೂ ಅದರ ಚಂದಾ ಶುಲ್ಕವನ್ನು ನಿಗದಿಪಡಿಸುವ ಸಂಬಂಧವಾಗಿ ಸೂಕ್ತ ನಿರ್ಣಯ ತೆಗೆದು ಕೊಳ್ಳುವ ಅಧಿಕಾರ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.**

(೫) **ಪರಿಷತ್ತಿನ ಸದಸ್ಯತ್ವದ ನೋಂದಣಿಯ ಅಭಿಯಾನವನ್ನು ಪರಿಷತ್ತಿನ ವಿವಿಧ ಘಟಕಗಳ ಮಟ್ಟದಲ್ಲಿ ಜರುಗಿಸುವ ಕುರಿತು ಸೂಕ್ತ ಮಾರ್ಗದರ್ಶಿ ಸೂಚನೆಗಳನ್ನು ಆಗಾಗ್ಗೆ ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. ಇಂಥ ಸೂಚನೆಗಳನ್ನು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ದಾಖಲಿಸತಕ್ಕದ್ದು.**

(೬) ಸದಸ್ಯತ್ವ ಒಮ್ಮೆ ಅಂಗೀಕಾರವಾದ ಅನಂತರ ಅದರ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವಂತಿಲ್ಲ.

(೭) **ವಾರ್ಷಿಕ ಸಾಮಾನ್ಯ / ವಿಶೇಷ ಸಭೆಯಲ್ಲಿ ಭಾಗವಹಿಸಲು ಮತ್ತು ಇಂಥ ಸಭೆಗಳಲ್ಲಿ ಅಲ್ಲದೇ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಲು ಸದಸ್ಯರು ಪರಿಷತ್ತಿನ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್‌ನ್ನು ಹೊಂದಿರಬೇಕು. ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಹೊಂದದೆ ಇರುವವರು ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಗುರುತಿನ ಚೀಟಿಯಲ್ಲಿ ಒಂದನ್ನು ತೋರಿಸಿ ಸದಸ್ಯರ ಸಭೆಯಲ್ಲಿ ಭಾಗವಹಿಸುವುದು.**

(೮) ಯಾವುದೇ ಸದಸ್ಯನ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ, ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿದ್ದುದು ಕಂಡುಬಂದಲ್ಲಿ, ಅಂತಹ ಸದಸ್ಯರಿಂದ ಅಥವಾ ಸದಸ್ಯ ಸಂಸ್ಥೆಯಿಂದ ವಿವರಣೆಯನ್ನು ಪಡೆದು, ಪರಿಶೀಲನೆ ಮಾಡಿ **ಮೇಲ್ನೋಟಕ್ಕೆ ಆರೋಪ ಸರಿ ಇದೆ ಎಂದು ಕಂಡುಬಂದಲ್ಲಿ, ಅಂತಹ ವ್ಯಕ್ತಿಯ / ಸಂಸ್ಥೆಯ ಸದಸ್ಯತ್ವವನ್ನು ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿರಿಸುವ ಅಧಿಕಾರವು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಈ ಸಂಬಂಧ ತಮ್ಮ ನಿರ್ಣಯಕ್ಕೆ ಅಧ್ಯಕ್ಷರು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಪಡೆಯಬೇಕು.**

(೯) **ಕಾರ್ಯಕಾರಿ ಸಮಿತಿಯ ಅಥವಾ ಆಜೀವ ಸದಸ್ಯರಲ್ಲಿ ಯಾರಾದರೂ ಆಪರಾಧಿಕ ಅಪರಾಧದ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾದಲ್ಲಿ ಅಥವಾ ಅವರು ಪರಿಷತ್ತಿನ ಘನತೆ, ಗೌರವಗಳಿಗೆ ಧಕ್ಕೆಯುಂಟು ಮಾಡಿದಲ್ಲಿ ಅಂತಹವರು ಪರಿಷತ್ತಿನ ಸದಸ್ಯತ್ವ ದಿಂದ ಅಮಾನತ್ತು ಗೊಳಿಸಲ್ಪಡುತ್ತಾರೆ. ಆಪರಾಧಿಕ ಅಪರಾಧಗಳಿಗೆ ಶಿಕ್ಷೆಗೆ ಒಳಗಾದಲ್ಲಿ, ಅಂತಹವರಿಗೆ ಹೇಳಿಕೆ ನೀಡಲು ಅವಕಾಶ ಕಲ್ಪಿಸಿ, ಅವರು ಎಸಗಿದ ಅಪರಾಧದ ತೀಕ್ಷ್ಣತೆಯನ್ನು ಪರಿಗಣಿಸಿ, ಅವರನ್ನು ಪರಿಷತ್ತಿನ ಸದಸ್ಯತ್ವದಿಂದ ವಜಾಗೊಳಿಸಲಾಗುತ್ತದೆ.**

(೧೦)ಯಾವುದೇ ಸದಸ್ಯ, ಸದಸ್ಯ ಸಂಸ್ಥೆಯು ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದಲ್ಲಿ **ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕೇಂದ್ರ ಕಾರ್ಯಕಾರಿ ಸಮಿತಿಗೆ ಇರುತ್ತದೆ. ಈ ನಿರ್ಣಯವನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ದಾಖಲಿಸುವುದು ಅವಶ್ಯ.**

**ನಿಯಮ (೮). ಸದಸ್ಯರ ಮತ್ತು ಸದಸ್ಯ-ಸಂಸ್ಥೆಗಳ ಹಕ್ಕು-ಬಾಧ್ಯತೆಗಳು ಹಾಗೂ ಸೌಲಭ್ಯಗಳು :** (೧) ಪರಿಷತ್ತಿನ ಉತ್ಸವ, ಉಪನ್ಯಾಸ, ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಕ್ರಮಗಳಲ್ಲಿ **ಹಾಜರಾಗುವ ಮಹಾಪೋಷಕರು, ಪೋಷಕರು ಹಾಗೂ ಮಹಾಪೋಷಕ ಸಂಸ್ಥೆ / ಪೋಷಕ ಸಂಸ್ಥೆಯ ಪ್ರತಿನಿಧಿಯೊಬ್ಬರಿಗೆ, ದಾನಿಗಳಿಗೆ, ದಾನಿ ಸಂಸ್ಥೆಗಳ ಪ್ರತಿನಿಧಿಯೊಬ್ಬರಿಗೆ ವೇದಿಕೆಯ ಮುಂಭಾಗದಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಿ ಅವರನ್ನು ಗೌರವಿಸುವುದು.**

(೨) **ಎಲ್ಲ ವರ್ಗಗಳ ಸದಸ್ಯರೂ ಪರಿಷತ್ತಿನ ಆಜೀವ ಸದಸ್ಯರೆಂದು ಪರಿಗಣಿಸಲ್ಪಟ್ಟು ಅವರು** ಪುಸ್ತಕ ಭಂಡಾರ, ವಾಚನಾಲಯ ಮೊದಲಾದವುಗಳ ಸೌಲಭ್ಯಗಳನ್ನು ಪಡೆಯಲು **ಹಾಗೂ ಚುನಾವಣಾ ನಿಯಮಗಳಿಗೆ ಒಳಪಟ್ಟು ಚುನಾವಣೆಗಳಲ್ಲಿ ಮತದಾನ ಮಾಡಲು ಅರ್ಹರಾಗಿರುತ್ತಾರೆ.**

(೩) **ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಪ್ರತಿಗಳನ್ನು ಮಾರಾಟ ಮಾಡಲು, ಎಲ್ಲಾ ವರ್ಗಗಳ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ನೀಡಲು ಆಯಾ ಕಾಲಕ್ಕೆ ತಕ್ಕಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರ ವಿವೇಚನೆಗೆ ಒಳಪಟ್ಟಿರುತ್ತದೆ**

(೪) **ಸಾಮಾನ್ಯ ಹಾಗೂ ವಿಶೇಷ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಮತ್ತು ಚುನಾವಣೆಗಳಲ್ಲಿ ಮತದಾನ ಮಾಡುವುದಕ್ಕೆ ಸದಸ್ಯ ಸಂಸ್ಥೆಯು ಕನ್ನಡ ಓದು, ಬರಹ ಬಲ್ಲ ಒಬ್ಬ ಪ್ರತಿನಿಧಿಯನ್ನು ಕಳುಹಿಸಬಹುದು. ಸದಸ್ಯ ಸಂಸ್ಥೆಯು, ಪ್ರತಿನಿಧಿಯ ಹೆಸರು, ಮೊಬೈಲ್ ಸಂಖ್ಯೆ ಇನ್ನಿತರ ವಿವರಗಳೊಂದಿಗೆ ಸಭೆ ನಡೆಯುವ ೧೫ ದಿನಗಳ ಮುಂಚಿತವಾಗಿ ಹಾಗೂ ಮತದಾನದ ದಿನಾಂಕಕ್ಕೆ ೪೫ ದಿನಗಳ ಮುಂಚಿತವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಇಂಥ ಲಿಖಿತ ಮನವಿಯನ್ನು ಒಪ್ಪಿಕೊಂಡ ಬಗ್ಗೆ ಪರಿಷತ್ತು ಸಂಬಂಧಪಟ್ಟ ಸದಸ್ಯ ಸಂಸ್ಥೆಗೆ ತಿಳಿಸತಕ್ಕದ್ದು.**

(೫) **ಸದಸ್ಯ ಸಂಸ್ಥೆಯ ಪ್ರತಿನಿಧಿಗೆ ಪರಿಷತ್ತಿನ ಯಾವುದೇ ಸ್ಥಾನಕ್ಕೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶವಿರುವುದಿಲ್ಲ. ಆದರೆ ಅಂತಹ ವ್ಯಕ್ತಿ ವೈಯಕ್ತಿಕವಾಗಿ ಪರಿಷತ್ತಿನ ಆಜೀವ ಸದಸ್ಯತ್ವವನ್ನು ಪಡೆದಿದ್ದರೆ ಸ್ಪರ್ಧಿಸಬಹುದು.**

೧) ಈ ಉಪನಿಯಮದ ಅಡಿಯಲ್ಲಿ ನಿಯಮ ೬ ರ ಉಪನಿಯಮ (೨) ಖಂಡ (ಅ), (ಅ), (ಇ), (ಈ), (ಉ), (ಊ), (ಋ), (ಎ), (ಏ), **(ಐ) ಮತ್ತು (ಒ)** ಅನ್ವಯವಾಗುತ್ತದೆ. **(ಸಂಸ್ಥೆಯ ಅಂತಹ ವ್ಯಕ್ತಿ ವೈಯಕ್ತಿಕವಾಗಿ ಪರಿಷತ್ತಿನ ಆಜೀವ ಸದಸ್ಯತ್ವವನ್ನು ಪಡೆದಿದ್ದರೆ ಸ್ಪರ್ಧಿಸಬಹುದು.)**

೨) ಈ ಉಪನಿಯಮದ ಅಡಿಯಲ್ಲಿ ನಿಯಮ ೬ ರ ಉಪನಿಯಮ (೨) (ಇ), ಆಜೀವ ಸದಸ್ಯರು(ಎ) ಆಜೀವ ಸದಸ್ಯರು (ಏ) ಆಜೀವ ಸದಸ್ಯರು ಅನ್ವಯವಾಗುತ್ತದೆ.

**(೬) (ಅ) ಯಾವುದೇ ಸದಸ್ಯನು ಕೇಂದ್ರ ಪರಿಷತ್ತಿನ ಅಥವಾ ತನಗೆ ಸಂಬಂಧಿಸಿದ ಘಟಕದ ಕಾರ್ಯಕಾರಿ ಸಮಿತಿಯ ಯಾವುದೇ ನಿರ್ಣಯದಿಂದ/ಗೊತ್ತುವಳಿ ಯಿಂದ ಬಾಧಿತನಾದಲ್ಲಿ ಅಂತಹ ಸದಸ್ಯನು ವಾರ್ಷಿಕ/ವಿಶೇಷ ಸಾಮಾನ್ಯ ಸಭೆಗೆ ಮೇಲ್ಮನವಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾನೆ.**

**(ಆ) ಪ್ರತಿ ಅರ್ಹ ಸದಸ್ಯರಿಗೆ ಸಾಮಾನ್ಯ ಸಭೆಯಲ್ಲಿ/ವಿಶೇಷ ಸಭೆಯಲ್ಲಿ/ಚುನಾವಣೆಯಲ್ಲಿ ಮತದಾನ ಮಾಡುವ ಸಂದರ್ಭದಲ್ಲಿ ಒಂದೇ ಮತ ಚಲಾಯಿಸಲು ಅವಕಾಶವಿರತಕ್ಕದ್ದು.**

**(೭) ಯಾವುದೇ ಸಭೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪರ ಮತ್ತು ವಿರೋಧವಾಗಿ ಸಮಾನ ಮತಗಳು ಬಂದಲ್ಲಿ ಆ ಸಭೆಯ ಅಧ್ಯಕ್ಷರಿಗೆ ಹೆಚ್ಚುವರಿಯಾಗಿ ಒಂದು ನಿರ್ಣಾಯಕ ಮತವನ್ನು ಚಲಾಯಿಸಲು ಅಧಿಕಾರ ಇರತಕ್ಕದ್ದು.**

**೩. ದತ್ತಿ ವಿಭಾಗ:**

**ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಯೋಜನೆ**

ಪರಿಷತ್ತು ಪ್ರತಿವರ್ಷವೂ ಆಯೋಜಿಸುವ ಖಾಯಂ ವಾರ್ಷಿಕ ಕಾರ್ಯಕ್ರಮಗಳಿಗೆ ಮೂಲಾಧಾರವೆಂದರೆ ದತ್ತಿನಿಧಿಗಳು. ಸಾಹಿತ್ಯ ಪರಿಷತ್ತು ಪ್ರಾರಂಭವಾದಾಗ ದತ್ತಿನಿಧಿ ಯೋಜನೆ ಇರಲಿಲ್ಲ. ಕೇವಲ ದಾನಿಗಳಿಂದ ದೇಣಿಗೆ ಸಂಗ್ರಹ ಮತ್ತು ವಿವಿಧ ವರ್ಗಗಳ ಸದಸ್ಯರಿಂದ ಚಂದಾ ವಸೂಲಿ ಆಧಾರದ ಮೇಲೆ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡಲಾಗಿತ್ತು.

ದತ್ತಿನಿಧಿ ಎಂದರೆ "ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ಸ್ಮರಣೆಗೆ ಅಥವಾ ನಾಡು–ನುಡಿಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ತಮ್ಮ ಆಶಯದಂತೆ ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು ಶಾಶ್ವತ ಠೇವಣಿಯನ್ನು ಇಟ್ಟು, ತಾವು ತಿಳಿಸಿದ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು." ಹೀಗೆ ಪ್ರತಿವರ್ಷ ದತ್ತಿದಾನಿಗಳ ಕಾರ್ಯಕ್ರಮಗಳನ್ನು ನಡೆಸಲಾಗುವುದು.

**೧೯೩೫ನೇ ಇಸವಿಯಲ್ಲಿ ಆಚಾರ್ಯ ಬಿ.ಎಂ. ಶ್ರೀಕಂಠಯ್ಯ ಅವರು, ಗಮಕ ಕಲೆಯ ಪ್ರೋತ್ಸಾಹಕ್ಕಾಗಿ ರೂ. ೧೦೦೦/– (ಒಂದು ಸಾವಿರ ರೂಪಾಯಿ)ಗಳ ನಿಧಿಯನ್ನು ಸ್ಥಾಪಿಸಿದ್ದು, ಇದು ಪರಿಷತ್ತಿನ ಮೊಟ್ಟ ಮೊದಲ ದತ್ತಿನಿಧಿಯಾಗಿದೆ.**

ಪರಿಷತ್ತಿನ ಅಂಗರಚನೆಗೆ ವಿರೋಧವಾಗದಂತೆ, ನಿಧಿಯ ಬಡ್ಡಿಯ ಬಳಕೆಗೆ ಆಶಯಗಳನ್ನು ಸೂಚಿಸಿ ಅನೇಕ ಅಭಿಮಾನಿಗಳು, ಸಂಸ್ಥೆಗಳು, ಸಂಘಟನೆಗಳು ಪರಿಷತ್ತಿಗೆ ನಿರ್ದಿಷ್ಟ ಉದ್ದೇಶಗಳಿಗೆ ನಿಧಿ ನೀಡಿ ದತ್ತಿಗಳನ್ನು ಸ್ಥಾಪಿಸಿದ್ದಾರೆ. ಹೊರ ರಾಜ್ಯಗಳಲ್ಲಿ, ವಿದೇಶಗಳಲ್ಲಿ ವಾ ಸಿಸಿರುವ ಕನ್ನಡಿಗರೂ ಈ ನೆರವಿನಲ್ಲಿ ತಮ್ಮ ಪಾಲನ್ನು ನೀಡಿ ಅಭಿಮಾನ ಮೆರೆದಿದ್ದಾರೆ. **ರೂ. ೧೦೦೦/– ಒಂದು ಸಾವಿರ ರೂಪಾಯಿಗಳಿಂದ ಹಿಡಿದು ಒಂದು ಕೋಟಿ ಐವತ್ತು ಲಕ್ಷದವರೆಗೂ ವಿವಿಧ ಮೊತ್ತದ ದತ್ತಿ ನಿಧಿ ಕಾಣಿಕೆಯಾಗಿ ಬಂದಿವೆ.**

ಇಂದು ಸಾಹಿತ್ಯ ಪರಿಷತ್ತಿನಲ್ಲಿ **ಒಟ್ಟು ೨೧೪೩ (ಎರಡು ಸಾವಿರದ ಒಂದುನೂರ ನಲವತ್ಮೂರು) ದತ್ತಿನಿಧಿಗಳಿದ್ದು ಅದರಲ್ಲಿ ೪೨ (ನಲವತ್ತೆರಡು)** ದತ್ತಿ ಪ್ರಶಸ್ತಿಗಳನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರದಾನ ಮಾಡಲಾಗುತ್ತದೆ. ಮತ್ತು ವಿವಿಧ ಪುಸ್ತಕ ದತ್ತಿ ಪ್ರಶಸ್ತಿಗೆ ಒಟ್ಟು ೫೩ ಪ್ರಶಸ್ತಿಗಳನ್ನು ೫೭ ವಿವಿಧ ಪ್ರಕಾರಗಳಿಗೆ ಪ್ರದಾನ ಮಾಡಲು ಕಾರ್ಯಕ್ರಮ ಆಯೋಜಿಸಲಾಗುವುದು. ಅಲ್ಲದೇ ಪ್ರಕಟಣಾ ದತ್ತಿ, ಎಂ.ಎ. ತರಗತಿ ದತ್ತಿ, ಗ್ರಂಥ ಭಂಡಾರ ದತ್ತಿ, ಸಭಾ ಭವನ ದತ್ತಿ, ಪರೀಕ್ಷೆ ದತ್ತಿಗಳನ್ನು ಉದ್ದೇಶ ಹಾಗೂ ಆಶಯದನ್ವಯ ಸಾಹಿತ್ಯ ಪರಿಷತ್ತು ನಡೆಸಿಕೊಂಡು

ಬಂದಿದೆ. ಉಳಿದ ದತ್ತಿನಿಧಿಗಳನ್ನು ಜಿಲ್ಲಾವಾರು ಹಂಚಿಕೆ ಮಾಡಿದ್ದು ಜಿಲ್ಲಾಧ್ಯಕ್ಷರು ದತ್ತಿಯನುಸಾರ ದಾನಿಗಳ ಆಶಯದಂತೆ ಕಾರ್ಯಕ್ರಮವನ್ನು ಏರ್ಪಡಿಸಿ ಪರಿಷತ್ತಿಗೆ ಮಾಹಿತಿ ನೀಡುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ದಾಖಲಾದ ಅತ್ಯಂತ ಶ್ರೇಷ್ಠ ಹಾಗೂ ಮೌಲಿಕ ಸಾಹಿತ್ಯ ಪ್ರಶಸ್ತಿ **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನೃಪತುಂಗ ಸಾಹಿತ್ಯ ಪ್ರಶಸ್ತಿ** ಹಾಗೂ **ಮಯೂರ ವರ್ಮ ಸಾಹಿತ್ಯ ಪ್ರಶಸ್ತಿ.** ಮುಖ್ಯವಾಗಿ, ಶ್ರೀ ಚಾವುಂಡರಾಯ ಪ್ರಶಸ್ತಿ, ರಾಷ್ಟ್ರಕವಿ ಕುವೆಂಪು ದತ್ತಿ ಪ್ರಶಸ್ತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ, ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ, ಕನ್ನಡ ಚಳುವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ದತ್ತಿ, ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ, ಪದ್ಮಭೂಷಣ ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ (ತಮ್ಮ ಮಗಳು ಭುವನೇಶ್ವರಿ ಅವರ ಸ್ಮರಣಾರ್ಥ ಹೆಸರಿನಲ್ಲಿ ಇಟ್ಟಿರುವ ದತ್ತಿ) ಡಾ. ವಿಷ್ಣುವರ್ಧನ ಕಲಾದತ್ತಿ ಪ್ರಶಸ್ತಿ, ಶ್ರೀವಿಜಯ ಸಾಹಿತ್ಯ ಪ್ರಶಸ್ತಿ, ಪ್ರೊ. ಸಿ.ಹೆಚ್. ಮರಿದೇವರು ಪ್ರತಿಷ್ಠಾನ ದತ್ತಿ, ಎ.ಆರ್. ನಾರಾಯಣ ಭಟ್ಟ ಮತ್ತು ಸರೋಜಮ್ಮ ಗಾಂಧಿ ಪುರಸ್ಕಾರ ಪುದುವಟ್ಟು ದತ್ತಿ ಪ್ರಶಸ್ತಿ, ಮಾಹಿತಿ ಹಕ್ಕು ತಜ್ಞ ಜೆ.ಎಂ. ರಾಜಶೇಖರ ದತ್ತಿ ಪ್ರಶಸ್ತಿ, ಸಂಶೋಧನಾ ಕಮ್ಮಟ ದತ್ತಿನಿಧಿಗಳು ಪ್ರಮುಖವಾಗಿವೆ.

**ಕೆ.ಬಿ. ಚಂದ್ರ ಅವರು ತಾವು ಸಾಕಿದ್ದ ಗಿಳಿಗೆ ಮೀನಾಕ್ಷಿ ಎಂದು ಹೆಸರಿಟ್ಟಿದ್ದರು** ಆ ಹೆಸರಿನಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆಯಲ್ಲಿ ಸಿಹಿ ಹಂಚಲೆಂದು ಕೆ.ವಿ. ತಾಯಮ್ಮ ಮತ್ತು ಕೆ.ಬಿ. ಬಾಲಕೃಷ್ಣಯ್ಯ ದತ್ತಿ ಅವರ ಹೆಸರಿನಲ್ಲಿ ವಾರ್ಷಿಕ ಸಭೆಯ ದಿನ ಸಾಹಿತ್ಯ ಪರಿಷತ್ತಿನಲ್ಲಿರುವ ಸಾಹಿತಿಗಳ ಭಾವಚಿತ್ರಗಳಿಗೆ ಹೂವಿನ ಹಾರ ಹಾಕಲೆಂದೇ ದತ್ತಿಯನ್ನು ಇರಿಸಿದ್ದಾರೆ.

ಹೀಗೆ, ವೈವಿಧ್ಯಮಯ ಆಶಯಗಳನ್ನೊಳಗೊಂಡಿರುವ ದತ್ತಿನಿಧಿಯಿಂದ ಒಂದೊಂದು ಸಾಹಿತ್ಯಕ ಕಾರ್ಯಕ್ರಮಗಳನ್ನು ನಾಡಿನ ಒಂದಿಲ್ಲೊಂದು ಸ್ಥಳದಲ್ಲಿ ಪರಿಷತ್ತಿನ ಪರವಾಗಿ ನಡೆಸಲು ಸಾಧ್ಯವಾಗಿದೆ. ದಾನಿಗಳ ಕೊಡುಗೆ ಸಾರ್ಥಕವಾಗಿದೆ. ದತ್ತಿನಿಧಿ ಕಾಣಿಕೆ ನಿರಂತರವಾಗಿ ಬರುತ್ತಿರಬೇಕು. ಈ ಮೂಲಕ ಪರಿಷತ್ತು ನಾಡಿನ ಮೂಲೆ ಮೂಲೆಗಳಲ್ಲಿ ತನ್ನ ತೋಳನ್ನು ಚಾಚಬೇಕು, ನಾಡಿನ ಭಾವೈಕ್ಯತೆಗೆ ಇಂಬು ದೊರಕಬೇಕು ಎಂಬುದು ಪರಿಷತ್ತಿನ ಹಾರೈಕೆ.

**೪. ಕಾರ್ಯಕ್ರಮ ವಿಭಾಗ**

೧) ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
೨) ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರ ದಿನಾಚರಣೆ
೩) ಜಿಲ್ಲೆ/ತಾಲ್ಲೂಕು/ಸಮ್ಮೇಳನ
೪) ಗಣ್ಯರ ಜಯಂತಿ
೫) ಗಣ್ಯರ ಹುಟ್ಟುಹಬ್ಬಗಳು
೬) ಗಣ್ಯರ ಪುಣ್ಯಸ್ಮರಣೆ
೭) ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ
೮) ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ
೯) ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ
ರಾಷ್ಟ್ರೀಯ ಹಬ್ಬಗಳು
ಮತ್ತು ಕಾರ್ಯಕ್ರಮಗಳು
೧೦) **'ಕನ್ನಡದ ಧ್ರುವತಾರೆ'** ಸಾಧಕರೊಂದಿಗೆ ಮಾತುಕತೆ.

# ಕನ್ನಡ ಸಾಹಿತ್ಯ ಪರಿಷತ್ತು ಆಚರಿಸುವ ಜಯಂತ್ಯೋತ್ಸವ : 2024

| ಜನವರಿ | | |
|---|---|---|
| ಕ್ರ.ಸಂ. | ಹೆಸರು | ಜನ್ಮ ದಿನಾಂಕ |
| ೧) | ಚದುರಂಗ (೧೯೧೬) | ೧ |
| ೨) | ಡಾ.ಚಂದ್ರಶೇಖರ ಕಂಬಾರರ ಜನ್ಮದಿನ (೧೯೩೭) | ೨ |
| ೩) | ಬಿ.ಎಂ.ಶ್ರೀಕಂಠಯ್ಯ (೧೮೮೪) | ೩ |
| ೪) | ಶಂ.ಬಾ.ಜೋಶಿ (೧೮೯೬) | ೪ |
| ೫) | ಎಂ.ಕೆ.ಇಂದಿರಾ (೧೮೯೯) | ೫ |
| ೬) | ಆ.ನೇ.ಉಪಾಧ್ಯ (೧೯೦೬) | ೬ |
| ೭) | ಡಾ.ಎಂ.ವೀರಪ್ಪ ಮೊಯ್ಲಿ (೧೯೪೦) | ೧೨ |
| ೮) | ಸಂಸ (೧೮೯೮) | ೧೩ |
| ೯) | ಪಾಟೀಲ ಪುಟ್ಟಪ್ಪ (೧೯೨೦) | ೧೪ |
| ೧೦) | ಸು.ರಂ.ಎಕ್ಕುಂಡಿ (೧೯೨೩) | ೨೦ |
| ೧೧) | ಮುದ್ದಣ (೧೮೭೦) | ೨೪ |
| ೧೨) | ಕೆ.ಎಸ್.ನರಸಿಂಹ ಸ್ವಾಮಿ(೧೯೧೫) | ೨೬ |
| ೧೩) | ಅ.ರಾ.ಸೇ | ೨೬ |
| ೧೪) | ಪ್ರೊ.ಸಾ.ಶಿ.ಮರುಳಯ್ಯ (೧೯೩೧) | ೨೮ |
| ೧೫) | ದ.ರಾ. ಬೇಂದ್ರೆ (೧೮೯೬) | ೩೧ |
| | | |
| ಫೆಬ್ರವರಿ | | |
| ೧೬) | ಸಿದ್ದಲಿಂಗಯ್ಯ | ೩ |
| ೧೭) | ಪ್ರೊ.ಕೆ.ಎಸ್.ನಿಸಾರ್ ಅಹಮದ್ | ೫ |
| ೧೮) | ಪಾ.ವೆಂ.ಆಚಾರ್ಯ (೧೯೧೫) | ೬ |
| ೧೯) | ಡಾ.ಜಿ.ಎಸ್.ಶಿವರುದ್ರಪ್ಪ (೧೯೨೬) | ೭ |
| ೨೦) | ಪ್ರೊ.ದೊಡ್ಡರಂಗೇ ಗೌಡ (೧೯೪೬) | ೭ |
| ೨೧) | ಪ್ರೊ.ಎಸ್.ವಿ.ಪರಮೇಶ್ವರ ಭಟ್ಟ (೧೯೧೪) | ೮ |

| | | |
|---|---|---|
| ೨೨) | ಪ್ರೊ.ಬೆಳ್ಳಾವೆ ವೆಂಕಟ ನಾರಯಣಪ್ಪ (೧೮೭೨) | ೧೦ |
| ೨೩) | ಹಟ್ಟಿಯಂಗಡಿ ನಾರಾಯಣ ರಾಯರು (೧೮೬೩) | ೧೧ |
| ೨೪) | ಪ್ರೊ.ಎ.ಆರ್.ಕೃಷ್ಣಶಾಸ್ತ್ರಿ (೧೮೯೦) | ೧೨ |
| ೨೫) | ಡಾ.ಪ್ರಭುಶಂಕರ್ (೧೯೨೯) | ೧೫ |
| ೨೬) | ಪ್ರೊ.ಎಲ್.ಎಸ್.ಶೇಷಗಿರಿ ರಾವ್ (೧೯೨೫) | ೧೬ |
| ೨೭) | ಪ್ರೊ.ಎಂ.ಗೋಪಾಲಕೃಷ್ಣ ಅಡಿಗ (೧೯೧೮) | ೧೮ |
| ೨೮) | ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ (೧೯೩೧) | ೨೦ |
| ೨೯) | ಪಂಜೆ ಮಂಗೇಶ ರಾವ್ (೧೮೭೪) | ೨೨ |
| ೩೦) | ಬಿ.ಶಿವಮೂರ್ತಿ ಶಾಸ್ತ್ರಿ (೧೯೦೩) | ೨೩ |
| ೩೧) | ಪ್ರೊ.ಅ.ರಾ.ಮಿತ್ರ (೧೯೩೫) | ೨೫ |
| ೩೨) | ನ್ಯಾಯಮೂರ್ತಿ ಕೋ.ಚನ್ನಬಸಪ್ಪ (೧೯೨೨) | ೨೭ |
| | | |
| **ಮಾರ್ಚ್** | | |
| ೩೩) | ಯುಗಾದಿ ಸಂಭ್ರಮ | |
| ೩೪) | ಎಂ.ಗೋವಿಂದ ಪೈ (೧೮೮೩) | ೨೩ |
| | | |
| **ಏಪ್ರಿಲ್** | | |
| ೩೫) | ಡಾ. ಬಿ.ಆರ್. ಅಂಬೇಡ್ಕರ್ | ೧೪ |
| ೩೬) | ಡಾ. ರಾಜ್‌ಕುಮಾರ್ | ೨೪ |
| | | |
| **ಮೇ** | | |
| ೩೭) | ಗಿರೀಶ್ ಕಾರ್ನಾಡ್ (೧೯೩೮) | ೧೯ |
| | | |
| **ಜೂನ್** | | |
| ೩೮) | ಶ್ರೀಮನ್ ನಾಲ್ವಡಿ ಕೃಷ್ಣರಾಜ ಒಡೆಯರ್ | ೪ |

| | | |
|---|---|---|
| ೩೯) | ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೮೯೧) | ೬ |
| | | |
| **ಜುಲೈ** | | |
| ೪೦) | ಡಾ.ಎಸ್.ಎಲ್.ಭೈರಪ್ಪನವರ (೧೯೩೪) | ೨೬ |
| | | |
| **ಆಗಸ್ಟ್** | | |
| ೪೧) | ಡಾ.ವಿ.ಕೃ.ಗೋಕಾಕ್ | ೧೦ |
| | | |
| **ಸೆಪ್ಟಂಬರ್** | | |
| ೪೨) | ಸರ್.ಎಂ.ವಿಶ್ವೇಶ್ವರಯ್ಯನವರು | ೧೫ |
| **ಅಕ್ಟೋಬರ್** | | |
| ೪೩) | ಡಾ.ಶಿವರಾಮ ಕಾರಂತರ | ೧೦ |
| ೪೪) | ಮಿರ್ಜಾ ಇಸ್ಮಾಯಿಲ್ | ೨೪ |
| | | |
| **ನವಂಬರ್** | | |
| | | |
| **ಡಿಸೆಂಬರ್** | | |
| ೪೫) | ವ್ಯಾಸರಾಯ ಬಲ್ಲಾಳ (೧೯೨೩) | ೧ |
| ೪೬) | ಡಾ.ಯು.ಆರ್.ಅನಂತ ಮೂರ್ತಿ | ೨೧ |
| ೪೭) | ಕುವೆಂಪು (೧೯೦೪) | ೨೯ |

# ಕನ್ನಡ ಸಾಹಿತ್ಯ ಪರಿಷತ್ತು ಆಚರಿಸುವ ರಾಷ್ಟ್ರೀಯ ಕಾರ್ಯಕ್ರಮ: 2024

| ಜನವರಿ | | |
|---|---|---|
| ಕ್ರ.ಸಂ. | ಕಾರ್ಯಕ್ರಮಗಳು | ಜನ್ಮ ದಿನಾಂಕ |
| ೧) | ಗಣರಾಜ್ಯೋತ್ಸವ | ೨೬ |
| ಮೇ | | |
| ೨) | ಕಾರ್ಮಿಕ ದಿನಾನಚರಣೆ | ೧ |
| ೩) | ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ | ೫ |
| ಆಗಸ್ಟ್ | | |
| ೪) | ಸ್ವಾತಂತ್ರ್ಯ ದಿನಾಚರಣೆ | ೧೫ |
| ನವೆಂಬರ್ | | |
| ೫) | ಕನ್ನಡ ರಾಜ್ಯೋತ್ಸವ | ೧ |

೫. **ಸಂಶೋಧನಾ ವಿಭಾಗ/ಶಾಸನಶಾಸ್ತ್ರ ಡಿಪ್ಲೋಮಾ ತರಗತಿ**

I. **ಸಂಶೋಧನಾ ಕೇಂದ್ರ / ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳು**

* ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳಿಗೆ, ಪ್ರವೇಶಾತಿ, ನೊಂದಣಿ, ತರಗತಿಗಳ ವ್ಯವಸ್ಥೆ, ಅಧ್ಯಾಪಕರಿಗೆ ಪತ್ರ ವ್ಯವಹಾರ, ಸಂಭಾವನೆ, ಪರೀಕ್ಷೆ ವ್ಯವಸ್ಥೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರ ರವಾನೆ.
* ಹಂಪಿ ವಿಶ್ವವಿದ್ಯಾಲಯ ಮಾನ್ಯತಾ ಸಂಸ್ಥೆಯಾಗಿ ಪಿಎಚ್.ಡಿ. ಪ್ರವೇಶಾತಿ.
* ಹಂಪಿ ವಿಶ್ವವಿದ್ಯಾಲಯದೊಂದಿಗೆ ಪತ್ರ ವ್ಯವಹಾರ, ಅರ್ಧ ವಾರ್ಷಿಕ ವರದಿಗೆ ಸಿದ್ಧತೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ಮಾರ್ಗದರ್ಶಕರಿಗೆ, ಮಾಹಿತಿ ನೀಡುವುದು, ಸಭೆಗೆ ಸಿದ್ಧತೆ, ಸಭಾ ನಡವಳಿ ಜೊತೆಗೆ ವಿದ್ಯಾರ್ಥಿಗಳ ಶುಲ್ಕ ವರದಿಯನ್ನು, ವಿ.ವಿ.ಗೆ ಕಳುಹಿಸುವಿಕೆ. ಕರಡು, ಅಂತಿಮ ಪ್ರಬಂಧ ವಿ.ವಿ.ಗೆ ಕಳುಹಿಸುವುದು.
* ಸಾಹಿತ್ಯ ಪರೀಕ್ಷೆಗಳು, ಶಾಸನಶಾಸ್ತ್ರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ನಿರ್ವಹಣಾ ಕಾರ್ಯ.
* ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ, ಪತ್ರ ವ್ಯವಹಾರ, ಕಾರ್ಯಕ್ರಮದ ಸಿದ್ಧತೆ, ಸಂಬಂಧಿಸಿದ ಬಿಲ್ಲುಗಳ ಪಾವತಿ.
* ಮರುಮೌಲ್ಯಮಾಪನ...

II. **ಪರೀಕ್ಷಾ ವಿಭಾಗ**

* ಜನ ಸಾಮಾನ್ಯರಲ್ಲಿ ಅದರಲ್ಲಿಯೂ ವಿಶೇಷವಾಗಿ ಕನ್ನಡ ಯುವಜನತೆಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ಆಸಕ್ತಿ ಮೂಡಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಬಿ.ಎಂ.ಶ್ರೀಯವರು ರೂಪಿಸಿದ ಮುಖ್ಯ ಯೋಜನೆ ಕನ್ನಡ ಸಾಹಿತ್ಯ ಪರೀಕ್ಷೆಗಳು. ೧೯೪೦ರ ಜೂನ್ ತಿಂಗಳಿನಿಂದ 'ಕನ್ನಡ

ಅಣುಗ' 'ಕನ್ನಡ ಕಾವ' 'ಕನ್ನಡ ಜಾಣ' ಪರೀಕ್ಷೆಗಳು ಆರಂಭವಾದವು. ೧೯೪೮ರಲ್ಲಿ 'ಅಣುಗ'ವನ್ನು ಕೈ ಬಿಡಲಾಯಿತು. ೧೯೬೬ರಲ್ಲಿ 'ಕನ್ನಡ ರತ್ನ' ಪರೀಕ್ಷೆ ಆರಂಭವಾಗಿದ್ದು ೧೯೯೨ರಲ್ಲಿ 'ಕನ್ನಡ ಪ್ರವೇಶ' ಆರಂಭವಾಯಿತು. ಈ ಎಲ್ಲಾ ಪರೀಕ್ಷೆಗಳು ಲಕ್ಷಾಂತರ ಕನ್ನಡಿಗರಲ್ಲಿ ಭಾಷೆ ಮತ್ತು ಸಾಹಿತ್ಯದ ಕುರಿತು ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದು ನಿರಂತರವಾಗಿ ನಡೆದುಕೊಂಡು ಬರುತ್ತಿವೆ.

* ಕನ್ನಡ ಸಾಹಿತ್ಯ ಪರಿಷತ್ತು ೨೦೨೪-೨೫ನೆಯ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ೨೦೨೪ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಮೇಲ್ಕಂಡ ಪರೀಕ್ಷೆಗಳಿಗೆ ಅರ್ಜಿಯನ್ನು ಸಲ್ಲಿಸಲು ೨೦೨೪ರ ಆಗಸ್ಟ್ ೩೧ ಕೊನೆಯ ದಿನಾಂಕವಾಗಿದ್ದು, ೨೦೨೪ರ ಸೆಪ್ಟೆಂಬರ್ ೧೫ರವರೆಗೆ ದಂಡದ ಶುಲ್ಕ ರೂ. ೫೦-೦೦ ಅನ್ನು ಹೆಚ್ಚುವರಿಯಾಗಿ ನೀಡಿ ಅರ್ಜಿ ಸಲ್ಲಿಸಬಹುದು.

* ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯನ್ನು ರೂ. ೨೫-೦೦ಗಳ ಶುಲ್ಕ ಪಾವತಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ (ಬೆಂಗಳೂರು) ದಿನಾಂಕ ೦೧-೦೭-೨೦೨೪ ರಿಂದ ಪಡೆಯಬಹುದು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಹೆಸರಿಗೆ ಮೂವತ್ತು ರೂಪಾಯಿಗಳನ್ನು ಮನಿಯಾರ್ಡರ್ ಮಾಡಿದರೆ ಅರ್ಜಿಯನ್ನು ತಾವು ನೀಡಿರುವ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಲಾಗುವುದು.

* ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದು ಕೊಳ್ಳಬಹುದು. ಇವರು ನಿಗದಿತ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕ ರೂ.೨೫/-ಗಳನ್ನು ಪ್ರತ್ಯೇಕವಾಗಿ ಪಾವತಿಸುವುದು.

* ಹೆಚ್ಚಿನ ವಿವರಗಳಿಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮, ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಂತರ್ಜಾಲ ತಾಣಗಳಾದ

ಫೇಸ್ ಬುಕ್ : https://www.facebook.com/kasapaofficial,

https://www.facebook.com/KannadaSahityaParishattu

ಟ್ವಿಟರ್ : https://twitter.com/kannadaparishat

ಕೂ ಆಪ್ : https://www.kooapp.com/profile/kasapa

ಇನ್ ಸ್ಟಾಗ್ರಾಮ್ : https://www.instagram.com/kannadasahityaparishattu

ವೆಬ್ ಸೈಟ್ : https://kannadasahithyaparishattu.in

ದೂರವಾಣಿ ಸಂಖ್ಯೆ : ೦೮೦-೨೬೬೧೨೯೯೧, ೨೨೪೨೩೮೬೭, ೨೬೬೨೩೫೮೪

ಇವುಗಳ ಮೂಲಕವೂ ಮಾಹಿತಿಯನ್ನು ಪಡೆಯಬಹುದಾಗಿದೆ.

**ಸಾಹಿತ್ಯ ಪರೀಕ್ಷೆಗಳ ಕುರಿತು**

ಮೈಸೂರು ಮಹಾರಾಜರಾದ **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್** ಅವರ ಪೋಷಣೆಯೊಂದಿಗೆ, **ಸರ್ ಎಂ. ವಿಶ್ವೇಶ್ವರಯ್ಯ** ಹಾಗೂ **ಸರ್ ಮಿರ್ಜಾ ಇಸ್ಮಾಯಿಲ್** ಅವರ ಸಹಕಾರದೊಂದಿಗೆ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು **೧೦೯ ವರ್ಷಗಳ** ಸುದೀರ್ಘ ಹಾಗೂ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ಜೊತೆಗೆ **ಕನ್ನಡ-ಕನ್ನಡಿಗ-ಕರ್ನಾಟಕದ**

ಹಿತರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುವ ಪರಿಷತ್ತು ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದೆ ಹಾಗೂ ಎಲ್ಲಾ ಕನ್ನಡ ಸಂಘ–ಸಂಸ್ಥೆಗಳಿಗೆ ಮಾತೃಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪರಿಷತ್ತು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಸೇವೆ ಸಲ್ಲಿಸುತ್ತಿರುವುದರ ಜೊತೆಗೆ ಶೈಕ್ಷಣಿಕವಾಗಿಯೂ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡುತ್ತಾ ಬಂದಿದೆ.

ಕನ್ನಡ ಯುವ ಜನತೆಯಲ್ಲಿ ಕನ್ನಡ ಭಾಷಾ ಸಾಹಿತ್ಯ ಅಧ್ಯಯನದ ಬಗೆಗೆ ಆಸಕ್ತಿಯನ್ನು ಮೂಡಿಸಲು ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಜ್ಞಾನದ ಕೊರತೆಯನ್ನು ನೀಗಿಸಲು ಆಚಾರ್ಯ ಬಿ.ಎಂ.ಶ್ರೀ ಅವರು ರೂಪಿಸಿ ಪ್ರಾರಂಭಿಸಿದ ಮುಖ್ಯ ಯೋಜನೆಯಾದ ಕನ್ನಡ ಸಾಹಿತ್ಯ ಪರೀಕ್ಷೆಗಳಿಗೆ ೮೦ ವರ್ಷಗಳ ಇತಿಹಾಸವಿದೆ. ಅಂದಿನಿಂದ ಇಂದಿನವರೆಗೂ ಪರೀಕ್ಷೆಗಳ ಸ್ವರೂಪದಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ನಿಯಮಾನುಸಾರ ವರ್ಷಕ್ಕೊಮ್ಮೆ ನಡೆದುಕೊಂಡು ಬರುತ್ತಿದೆ.  ಆಸಕ್ತರಲ್ಲಿ ಕನ್ನಡ ಭಾಷಾ ಜ್ಞಾನವನ್ನು ಬೆಳೆಸುವ ನಿಟ್ಟಿನಲ್ಲಿ ಮತ್ತು ಸಾಹಿತ್ಯಾಸಕ್ತಿಯನ್ನು ಹೆಚ್ಚಿಸುವ ಆಶಯದಿಂದ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ತಜ್ಞರ ಸಮಿತಿಯನ್ನೊಳಗೊಂಡ ಪಠ್ಯಕ್ರಮ, ಸಾಹಿತ್ಯ ಪರೀಕ್ಷೆಗಳ ಪಾರದರ್ಶಕತೆ, ಯಾವುದೇ ಅಕ್ರಮಗಳಿಗೂ ಅವಕಾಶವಿಲ್ಲದಂತೆ ನಡೆಯುವ ಸಾಹಿತ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ದೊರೆಯುತ್ತದೆ. ಅಲ್ಲದೇ ಪದವೀಧರರಾಗಿದ್ದು ಕನ್ನಡ 'ರತ್ನ' ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರು ಹಾಗೂ ಕಲಬುರಗಿ ವಿಶ್ವವಿದ್ಯಾಲಯಗಳು ಕನ್ನಡ ಎಂ.ಎ.ಗೆ ಪ್ರವೇಶಾವಕಾಶ ಕಲ್ಪಿಸಿವೆ.

***ಕನ್ನಡ ಪ್ರವೇಶ :***

೧. ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಕಾಲಕ್ಕೆ ವಿದ್ಯಾರ್ಥಿಯ ವಯಸ್ಸು ೧೦ ವರ್ಷಕ್ಕೆ ಮೇಲ್ಪಟ್ಟಿರಬೇಕು.

***ಕನ್ನಡ ಕಾವ :***

೧. ಕನ್ನಡ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೨. ೭ನೆಯ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೩. ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಕಾಲಕ್ಕೆ ವಿದ್ಯಾರ್ಥಿಯ ವಯಸ್ಸು ೧೬ ವರ್ಷಕ್ಕೆ ಮೇಲ್ಪಟ್ಟಿರಬೇಕು.

***ಕನ್ನಡ ಜಾಣ :***

೧. ಕಾವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೨. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ

೩. ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಕಾಲಕ್ಕೆ ವಿದ್ಯಾರ್ಥಿಯ ವಯಸ್ಸು ೧೮ ವರ್ಷಕ್ಕೆ ಮೇಲ್ಪಟ್ಟಿರಬೇಕು.

***ಕನ್ನಡ ರತ್ನ :***

೧. ಜಾಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೨. ಪಿ.ಯು.ಸಿ. ೨ನೆಯ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೩. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ೩ ವರ್ಷಗಳ ಸೇವಾವಧಿ ಮುಗಿಸಿರಬೇಕು ಅಥವಾ

೪. ಸಂಸ್ಕೃತದ 'ಸಾಹಿತ್ಯ ಪರೀಕ್ಷೆ'ಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ

೫. ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಕಾಲಕ್ಕೆ ವಿದ್ಯಾರ್ಥಿಯ ವಯಸ್ಸು ೨೦ ವರ್ಷಕ್ಕೆ ಮೇಲ್ಪಟ್ಟಿರಬೇಕು.

***ಪರೀಕ್ಷಾ ನಿಯಮಾವಳಿ***

೧. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ಜುಲೈ ತಿಂಗಳ ಮೊದಲ ವಾರದಲ್ಲಿ ಕನ್ನಡ ಪ್ರವೇಶ, ಕನ್ನಡ ಕಾವ, ಕನ್ನಡ ಜಾಣ ಮತ್ತು ಕನ್ನಡ ರತ್ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಿ, ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿನ ಕೊನೆಯ ವಾರದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು.

೨. ವ್ಯಾಸಂಗ ಕೇಂದ್ರಗಳಲ್ಲಿ ಅಭ್ಯಾಸ ಮಾಡಿಯಾಗಲೀ ಅಥವಾ ಸ್ವಂತ ವ್ಯಾಸಂಗದಿಂದಾಗಲೀ ಪರೀಕ್ಷೆ ತೆಗೆದುಕೊಳ್ಳಬಹುದಾಗಿರುತ್ತದೆ. ಪರೀಕ್ಷಾರ್ಥಿಗಳು ಪರೀಕ್ಷೆಗಳ ಅರ್ಜಿಗಳನ್ನು ಪ್ರತಿವರ್ಷವೂ ಹೊಸದಾಗಿ ಪರಿಷತ್ತಿನ ಕಚೇರಿಯಿಂದ ಪಡೆದುಕೊಳ್ಳಬೇಕು.

೩. ೩೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸ್ಥಳದಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುವುದು. ಯಾವುದೇ ಕೇಂದ್ರದಲ್ಲಿ ೩೦ ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು. ವ್ಯಾಸಂಗ ಕೇಂದ್ರಗಳು ಎಲ್ಲಿ ಬೇಕಾದರೂ ಇರಬಹುದು. ವ್ಯಾಸಂಗ ಕೇಂದ್ರಗಳಿಗೆ ಮತ್ತು ಪರೀಕ್ಷಾ ಕೇಂದ್ರಗಳಿಗೆ ಮಂಜೂರಾತಿ ಕೊಡುವ ಅಥವಾ ತಿರಸ್ಕರಿಸುವ ಹಕ್ಕು ಪರಿಷತ್ತಿಗೆ ಇರುತ್ತದೆ.

೪. ಪರೀಕ್ಷಾ ಕೇಂದ್ರ ಮತ್ತು ದಿನಾಂಕವನ್ನು ಪರೀಕ್ಷೆಯ ದಿವಸಕ್ಕೆ ಕನಿಷ್ಟ ಹದಿನೈದು ದಿನಗಳ ಮುಂಚಿತವಾಗಿ ತಿಳಿಸಲಾಗುವುದು.

೫. ಅಭ್ಯರ್ಥಿಯು ಯಾವುದೇ ಪತ್ರಿಕೆಯಲ್ಲಿ ಅನುತ್ತೀರ್ಣನಾದರೆ, ಆ ಪತ್ರಿಕೆಗೆ ಪುನಃ ಪರೀಕ್ಷೆ ಬರೆಯಲು ಅವಕಾಶವಿದೆ, ಮೊದಲ ಪ್ರಯತ್ನವನ್ನು (Attempt) ಹೊರತುಪಡಿಸಿ, ನಂತರದ **ಸತತವಾದ ಎರಡು ಪ್ರಯತ್ನಗಳಿಗೆ ಇದು ಸೀಮಿತವಾಗಿದೆ.** ಈ ಅವಧಿಯಲ್ಲಿ ಪಠ್ಯಪುಸ್ತಕಗಳು ಬದಲಾದರೂ ಅವು ಮರುಪ್ರಯತ್ನದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.

೬. **ಪರೀಕ್ಷೆಯ ಎಲ್ಲಾ ಪತ್ರಿಕೆಗಳಲ್ಲಿ ಅನುತ್ತೀರ್ಣವಾಗಿದ್ದಲ್ಲಿ ಅಭ್ಯರ್ಥಿಯು ಹೊಸದಾಗಿ ಪರೀಕ್ಷೆ ಕಟ್ಟಬೇಕಾಗುತ್ತದೆ.**

೭. ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸುವುದಿಲ್ಲ. ಹಾಗೂ ಮುಂದಿನ ವರ್ಷಕ್ಕೆ ಕಾದಿರಿಸುವುದಾಗಲಿ ಅಥವಾ ಹೊಂದಾಣಿಕೆಗಾಗಲಿ ಅವಕಾಶವಿರುವುದಿಲ್ಲ.

೮. ಪರೀಕ್ಷೆಗೆ ಹಾಜರಾದವರಿಗೆ ಅಂಕಪಟ್ಟಿಯನ್ನು ಕೊಡಲಾಗುವುದು. ತೇರ್ಗಡೆಯಾದವರಿಗೆ ಪ್ರಮಾಣ ಪತ್ರ (ಸರ್ಟಿಫಿಕೇಟ್) ಕೊಡಲಾಗುವುದು.

**'ರತ್ನ' ಪರೀಕ್ಷೆಗೆ ಮನ್ನಣೆ**

ಕನ್ನಡ ರತ್ನ ಪರೀಕ್ಷೆಗೆ ಸರ್ಕಾರ ಅಂಗೀಕಾರ ನೀಡಿರುವ ಪತ್ರದ ನಕಲು

Office of the Director of Public Instruction in Mysore- Bangalore

No. E. 15-1053-236/57-58, dated 29th June 1966.

Reference : Letter No. 1950/1-10-1965 from the Parishat.

The 'Ratna' Examination conducted by the Parishat, Bangalore, is recognised.

**(Sd.) T. V. Thimmegowda**
For Director

**ಪದವೀಧರರಾಗಿದ್ದು** ಕನ್ನಡ 'ರತ್ನ' ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರು ಹಾಗೂ ಕಲಬುರಗಿ ವಿಶ್ವವಿದ್ಯಾನಿಲಯಗಳು ಕನ್ನಡ ಎಂ.ಎ.ಗೆ ಪ್ರವೇಶಾವಕಾಶ ಕಲ್ಪಿಸಿವೆ.

## ಸರ್ಕಾರದ ಸೌಲಭ್ಯ

ಇಲಾಖಾ ಭಾಷಾ ಪರೀಕ್ಷೆಯಿಂದ ವಿನಾಯಿತಿ.

Govt. Notification No. GAD 65 SSR 75, Dated 10-3-1976 GSR 91.

2. Amendment of Rule 5 :-

In Sub-Rule (1) of Rule 5 of the Karnataka Civil Services (Service and Kannada Language Examinations) Rules, 1974 (hereinafter referred to as the said rules) :

1)"(a) Diploma Course or Certificate Course in Kannada conducted by Bangalore University or Kava or Jana or Ratna Examinations conducted by Kannada Sahitya Parishat."

"(b) Any examination specified in schedule III as equivalent to the Kannada Language Examination.

ಮೇಲಿನ ಆದೇಶದ ಪ್ರಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಕಾವ ಅಥವಾ ಜಾಣ ಅಥವಾ ರತ್ನ ಪರೀಕ್ಷೆಗಳಿಗೆ ಕುಳಿತು ತೇರ್ಗಡೆಯಾದ ಕರ್ನಾಟಕ ಸರ್ಕಾರದ ಅಧಿಕಾರಿಗಳು ಮತ್ತು ನೌಕರರಿಗೆ ಇಲಾಖೆಯಿಂದ ಗೊತ್ತು ಮಾಡಿರುವ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ದೊರೆಯುತ್ತದೆ.

## ಶಾಸನಶಾಸ್ತ್ರ ಡಿಪ್ಲೊಮಾ

೨೦೧೦-೧೧ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಲಭ್ಯವಾದ ಶುಭ ಸಂದರ್ಭದಲ್ಲಿ ಕರ್ನಾಟಕ ಘನ ಸರ್ಕಾರವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪುರೋಭಿವೃದ್ಧಿಗಾಗಿ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಶೋಧನಾ ಕೇಂದ್ರ ಪ್ರಾರಂಭಿಸಲು ಒಂದು ಕೋಟಿ ಮತ್ತು ನಿಘಂಟು ರಚನೆಯ ಮರುಚಾಲನೆಗೆ ಒಂದು ಕೋಟಿ ರೂಪಾಯಿಗಳ ಉದಾರವಾದ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲಾಗಿತ್ತು.

ಸಂಶೋಧನಾಸಕ್ತರಿಗೆ, ವಿದ್ಯಾರ್ಥಿಗಳಿಗೆ, ಪ್ರಯೋಜನಕಾರಿಯಾದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಮಹತ್ವದ ವಿಶೇಷ ಸಂಶೋಧನಾ ಉಪನ್ಯಾಸಗಳನ್ನು ಆಯಾ ಕ್ಷೇತ್ರದ ಗಣ್ಯ ವಿದ್ವಾಂಸರುಗಳಿಂದ, ರಾಷ್ಟ್ರಮಟ್ಟದಲ್ಲಿ ಪ್ರಾಚೀನ ಸಾಹಿತ್ಯ ಅಧ್ಯಯನ ಶಿಬಿರವನ್ನೂ ಏರ್ಪಡಿಸಲಾಗಿತ್ತು ವಿವಿಧ ವಿದ್ವಾಂಸರುಗಳಿಂದ ಕನ್ನಡದ ಪ್ರಾಚೀನ ಸಮಗ್ರ ಸಾಹಿತ್ಯದ ಪರಾಮರ್ಶೆಯನ್ನು ಶ್ರವಣಬೆಳಗೊಳದಲ್ಲಿ, ದಾಸ ಸಾಹಿತ್ಯ ಶಿಬಿರವನ್ನು ಮಂಗಳೂರಿನಲ್ಲಿ ನಡೆಸಲಾಯಿತು. ಇದೇ ರೀತಿ ವಚನ ಸಾಹಿತ್ಯ ಶಿಬಿರವನ್ನು ಕೂಡಲಸಂಗಮದಲ್ಲಿಯೂ ನಡೆಸಲಾಯಿತು. ಕವಿಕಾವ್ಯ ಚಿಂತನಾ ಪ್ರಸಾರೋಪನ್ಯಾಸಗಳು, ಸಂಶೋಧನಾ ಕಮ್ಮಟಗಳನ್ನು ಆಯೋಜಿಸಲಾಗಿತ್ತು. ಆಯಾ ಶಿಬಿರಗಳಲ್ಲಿ ಚರ್ಚಿಸಲ್ಪಡುವ ವಿಚಾರಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಲಾಯಿತು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರ್ಷ ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳನ್ನು ಹಾಗೂ ಹಂಪಿ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ಪಿಎಚ್.ಡಿ. ಸಂಶೋಧನಾ ಅಧ್ಯಯನವನ್ನು ನಡೆಸುತ್ತಾ ಬಂದಿದೆ.

ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವು ಸಮೃದ್ಧವಾಗಿರುವ ಹಿನ್ನೆಲೆಯಲ್ಲಿ, ವಿಷಯ ತಜ್ಞರ ಸಲಹೆ ಸೂಚನೆಗಳೊಂದಿಗೆ ಶಾಸನಗಳಲ್ಲಿನ ಲಿಪಿ ಪರಿಚಯ, ಪ್ರಾಯೋಗಿಕ ತರಬೇತಿಯನ್ನು ಶಾಸನ ತರಗತಿಗಳ ಮೂಲಕ ಪರಿಷತ್ತು ಕಳೆದ ೪೭ ವರ್ಷಗಳಿಂದಲೂ ಆಸಕ್ತರಿಗೆ ಕಲಿಯಲು ಅನುವು ಮಾಡುತ್ತಾ ಬಂದಿದೆ. ಇಲ್ಲಿಂದ ತರಬೇತಿಗೊಂಡ ನೂರಾರು ವಿದ್ಯಾರ್ಥಿಗಳು ಸಂಶೋಧನಾ ಕ್ಷೇತ್ರದಲ್ಲಿ ಅಧ್ಯಯನ ಮಾಡಿ ನಾಡಿಗೆ, ಪರಿಷತ್ತಿಗೆ ಕೀರ್ತಿ ತಂದಿದ್ದಾರೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಖ್ಯಾತ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪರಿಷತ್ತು ಒಂಭತ್ತು ತಿಂಗಳ ಅವಧಿಯ ಶಾಸನ ಡಿಪ್ಲೊಮಾ ತರಗತಿಯನ್ನು ೨೦೦೬-೦೭ರಿಂದ ನಡೆಸುತ್ತಿದೆ. ಆಸಕ್ತರಿಗೆ ಶಾಸನ ಶಾಸ್ತ್ರ ವಿಷಯನ್ನು ಪರಿಚಯಿಸಿ ಹೆಚ್ಚಿನ ಕಾಳಜಿ ಮೂಡಿಸುವುದು ಈ ಡಿಪ್ಲೊಮಾ ತರಗತಿಯ

ಉದ್ದೇಶ. ಅದಕ್ಕನುಗುಣವಾಗಿ ವಿಷಯ ತಜ್ಞರಿಂದ ಬೋಧನಾ ವಿಷಯಗಳ ಪಠ್ಯಾವಳಿ ಹಾಗೂ ಪಠ್ಯಕ್ರಮಗಳನ್ನು ಸಿದ್ಧಪಡಿಸಲಾಗಿದೆ.

**ಉದ್ದೇಶ :**

ಪ್ರಾಚೀನ ಕರ್ನಾಟಕದ ಸಾಮಾಜಿಕ ಸಾಂಸ್ಕೃತಿಕ ಭಾಷಿಕ, ಐತಿಹಾಸಿಕ, ಧಾರ್ಮಿಕ, ಆರ್ಥಿಕ ರಾಜಕೀಯ ಆಡಳಿತಾತಕ ಅಧ್ಯಯನಕ್ಕೆ ಮೂಲ ಸಾಮಗ್ರಿಯಾಗಿರುವ ಶಾಸನಗಳು, ಪ್ರಾಚೀನ ಕಾಲದ ಸಂಸ್ಕೃತಿಯ ಬಹುಮುಖವನ್ನು ತಿಳಿಸುತ್ತವೆ. ನಮ್ಮ ಪರಂಪರೆಯ ಕಡೆಗೆ ಇತಿಹಾಸ ತಜ್ಞರನ್ನು ಸೆಳೆಯುವ ಶಾಸನಗಳು ಹೊಸ ಹೊಸದಾಗಿ ದೊರೆಯುತ್ತಲೇ ಇವೆ. ಅವುಗಳನ್ನು ಓದುವ, ಸಂಗ್ರಹಿಸುವ, ವ್ಯಾಖ್ಯಾನಿಸುವ ಕೆಲಸವನ್ನು ವಿದ್ವಾಂಸರು ನಡೆಸುತ್ತಲೇ ಇದ್ದಾರೆ. ಅಂತಹ ಕೆಲಸವನ್ನು ಕಲಿಯಬೇಕೆನ್ನುವ ಕುತೂಹಲಿಗಳಿಗೆ ಕಲಿಯುವ ಅವಕಾಶಗಳು ಅಪರೂಪ. ನಮ್ಮ ಪರಂಪರೆಯನ್ನು ರಕ್ಷಿಸಿಕೊಳ್ಳಲು, ಅದಕ್ಕೆ ತಕ್ಕ ಮನೋಭಾವವನ್ನು ಬೆಳೆಸಲು ತಕ್ಕ ತಳಹದಿಯನ್ನು ಆಸಕ್ತರಲ್ಲಿ ಮೂಡಿಸಬೇಕೆಂಬುದೇ ಈ ಶಾಸನ ಶಾಸ್ತ್ರ ಅಧ್ಯಯನದ ಉದ್ದೇಶವಾಗಿದೆ.

**ಪ್ರವೇಶಕ್ಕೆ ಅರ್ಹತೆ :**

೧. ೨೧ ವರ್ಷ ತುಂಬಿರಬೇಕು

ಅಥವಾ

೨. ಕನಿಷ್ಠ ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾಗಿರಬೇಕು.

ಅಥವಾ

೩. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ರತ್ನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**ತರಗತಿಯ ವಿವರಗಳು :**

೧. ಅಭ್ಯಾಸದ ಅವಧಿ ಒಟ್ಟು ಒಂಭತ್ತು ತಿಂಗಳು.
೨. ಮಂಗಳವಾರದಿಂದ ಶುಕ್ರವಾರದವರೆಗೆ ಸಂಜೆ ೬ ರಿಂದ ೭ ಗಂಟೆಯವರೆಗೆ ವಾರದಲ್ಲಿ ನಾಲ್ಕು ದಿವಸ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ತರಗತಿಗಳು ನಡೆಯುತ್ತವೆ.
೩. ತರಗತಿಗಳಿಗೆ ಹಾಜರಾತಿ ಹಾಗೂ ಕ್ಷೇತ್ರಕಾರ್ಯ ಕಡ್ಡಾಯ.
೪. ವಿದ್ವಾಂಸರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು.

## ಕನ್ನಡ ಪಿಎಚ್.ಡಿ. ಪದವಿ

ಶೈಕ್ಷಣಿಕ ಪ್ರಗತಿಯ ಹಾದಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ೨೦೧೧–೧೨ರಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದು, ವಿ.ವಿ.ಯ ಸಹಯೋಗದೊಂದಿಗೆ ಪಿಎಚ್.ಡಿ. ಕೋರ್ಸ್‌ನ್ನು ನಡೆಸುತ್ತಿದೆ. ಇದುವರೆವಿಗೂ ೧೬ ಸಂಶೋಧನಾರ್ಥಿಗಳು ಪಿಎಚ್.ಡಿ. ಪದವಿ ಪಡೆದುಕೊಂಡಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಪಿಎಚ್.ಡಿ. ಅಧ್ಯಯನ ಮಾಡಲು ಕನ್ನಡ ಸಾಹಿತ್ಯ ಪರಿಷತ್ತಿಗೆ ೨೦೧೧–೧೨ನೇ ಸಾಲಿನಿಂದ ಮಾನ್ಯತೆಯನ್ನು ನೀಡಿದೆ. ಈಗಾಗಲೇ ಸಂಶೋಧನಾರ್ಥಿಗಳು ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಸುಮಾರು ೨೫ಕ್ಕೂ ಹೆಚ್ಚು ಮಂದಿ ಎಂ.ಫಿಲ್ ಪದವಿಯನ್ನು ಪಡೆದಿರುತ್ತಾರೆ. ಈಗ ಯು.ಜಿ.ಸಿ. ರೂಪಿಸಿರುವ ನಿಯಮದಂತೆ ಎಂ.ಫಿಲ್. ಪದವಿಯನ್ನು ನಿಲ್ಲಿಸಲಾಗಿದೆ. (ಯು.ಜಿ.ಸಿ. ಸಾರ್ವಜನಿಕ ಪ್ರಕಟಣೆಯ ಸಂಖ್ಯೆ: F9-83/2023(PS/Misc.) Dated: 26th Dec. 2023 ರಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಯು.ಜಿ.ಸಿ. ಪ್ರಕಟಿಸಿರುವ ಆದೇಶವನ್ನು ಈ ಕೆಳಕಂಡಂತೆ ಅಳವಡಿಸಲಾಗಿದೆ.

ज्ञान-विज्ञान विमुक्तये

प्रा. मनिष र. जोशी
सचिव

**Prof. Manish R. Joshi**
Secretary

सत्यमेव जयते

भारत 2023 INDIA

विश्वविद्यालय अनुदान आयोग
**University Grants Commission**
(शिक्षा मंत्रालय, भारत सरकार)
(Ministry of Education, Govt. of India)

**No.F.9-83/2023(PS/Misc.)**

**26th December 2023/5 पौष 1945**
2 6 DEC 2023

**PUBLIC NOTICE**

**Subject: Discontinuation of M.Phil Degree as per clause 14 of University Grants Commission (Minimum Standards and Procedures for Award of Ph.D. Degree) Regulations, 2022**

It has come to the notice of the UGC that a few Universities are inviting fresh applications for M.Phil. (Master of Philosophy) program. In this regard, it is to bring to the notice that the M.Phil. degree is not a recognized degree. The Regulation No. 14 of the UGC (Minimum Standards and Procedures for Award of Ph.D. Degree) Regulations 2022 (https://www.ugc.gov.in/pdfnews/0909572_Minimum-Standards-and-Procedure-for-Award-of-PhD-Degree.pdf) clearly states that Higher Educational Institutions shall not offer M.Phil. program.

In this regard, it is informed that the UGC has framed University Grants Commission (Minimum Standards and Procedures for Award of Ph.D. Degree) Regulations, 2022 which has been published in the Gazette of India on 7th November, 2022.

The Universities authorities, therefore, are requested to take immediate steps to stop admissions to M.Phil. program for the 2023-24 academic year. Further, students are advised not to take admission in M.Phil. Program.

**(Manish Joshi)**

वसुधैव कुटुम्बकम्
ONE EARTH • ONE FAMILY • ONE FUTURE

बहादुरशाह ज़फ़र मार्ग, नई दिल्ली-110002 | Bahadur Shah Zafar Marg, New Delhi-110002
Ph.: 011-23236288/23239337 | Fax : 011-2323 8858 | E-mail : secy.ugc@nic.in

ಇದುವರೆವಿಗೆ ೧೬ ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಪದವಿ ಪ್ರಧಾನವಾಗಿದೆ. ಇನ್ನೂ ಐದು ಜನ ವಿದ್ಯಾರ್ಥಿಗಳು ಈಗಾಗಲೇ ಅಂತಿಮ ಮಹಾಪ್ರಬಂಧವನ್ನು ಸಲ್ಲಿಸಿದ್ದು ಮೌಖಿಕ ಪರೀಕ್ಷೆಗಾಗಿ ಕಾಯುತ್ತಿದಿದ್ದಾರೆ. ಪ್ರಸ್ತುತ ೧೬ ಪಿಎಚ್.ಡಿ. ವಿದ್ಯಾರ್ಥಿಗಳು ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರಸ್ತುತ ಸಾಲಿಗೆ ಪಿಎಚ್.ಡಿ. ಪ್ರವೇಶಾವಕಾಶವಿದ್ದು, ಆಸಕ್ತರು ಇದರ ಪ್ರಯೋಜನ ಪಡೆದುಕೊಳ್ಳಬಹುದು.

## ಸಂಶೋಧನಾ ಮಾಹಿತಿ ಕೇಂದ್ರ

ಸಮಸ್ತ ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಆರಂಭವಾಗಿ ಕಾರ್ಯಕ್ಷೇತ್ರವನ್ನು ವೈವಿಧ್ಯಮಯವಾಗಿ ವಿಸ್ತರಿಸಿಕೊಂಡಿದೆ. ಕರ್ನಾಟಕದಾದ್ಯಂತ ೩೧ ಜಿಲ್ಲೆಗಳಲ್ಲಿ ಹಾಗೂ ಎಲ್ಲಾ ತಾಲ್ಲೂಕುಗಳಲ್ಲೂ ತನ್ನ ಘಟಕಗಳನ್ನು ಹೊಂದಿರುತ್ತದೆ. ಅಲ್ಲದೇ ಗಡಿ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಹಾಗೂ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲೂ ಗಡಿನಾಡು/ರಾಜ್ಯ ಘಟಕಗಳನ್ನು ಹಾಗೂ ವಿದೇಶಗಳಲ್ಲಿಯೂ ಘಟಕಗಳನ್ನು ಹೊಂದಿದ್ದು, ಪರಿಷತ್ತು ಸುಮಾರು ೩,೮೮,೦೦೦ ಸದಸ್ಯ ಬಲವನ್ನು ಹೊಂದಿದೆ. ಕನ್ನಡದ ಅನೇಕ ಮೌಲಿಕವಾದ ಗ್ರಂಥಗಳ ಜೊತೆಗೆ, ಜನಸಾಮಾನ್ಯರಿಗಾಗಿ ಹಳಗನ್ನಡ ಕಾವ್ಯಗಳ ಗದ್ಯಾನುವಾದಗಳನ್ನು ಪ್ರಕಟಿಸಲಾಗುತ್ತಿದೆ.

ಕನ್ನಡ ಸಾಹಿತ್ಯ ಪರಿಷತ್ತು, ಸಂಶೋಧನಾ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದು, ಹಂಪಿ ವಿಶ್ವವಿದ್ಯಾಲಯದ ಪಿಎಚ್.ಡಿ. ಮಾನ್ಯತಾ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಇದರ ಜೊತೆಗೆ ಶಾಸನ ಶಾಸ್ತ್ರಕ್ಕೆ ಸಂಬಂಧಿಸಿದ ಡಿಪ್ಲೋಮಾ ತರಗತಿಗಳನ್ನು ನಡೆಸುತ್ತಿದ್ದು, ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಶಾಸನಗಳನ್ನು ಅಧ್ಯಯನ ಮಾಡುವ ಕೌಶಲವನ್ನು ಬೆಳೆಸುವಲ್ಲಿ ನಿರಂತರ ಪ್ರಯತ್ನಿಸುತ್ತಿದೆ. ಪರಿಷತ್ತಿನಲ್ಲಿರದ ಗ್ರಂಥಾಲಯದ ಪುಸ್ತಕಗಳನ್ನು ಪರಾಮರ್ಶನ ಮಾಡಲು ವ್ಯವಸ್ಥೆ ಮಾಡಿರುವುದರ ಸಮಗ್ರ ಕರ್ನಾಟಕ ವ್ಯಾಪ್ತಿಗೆ ಒಳಪಡಿಸಿ **ಮೂಲಭೂತ ಸಂಶೋಧನೆಗೆ** ಅವಕಾಶವನ್ನು ಕಲ್ಪಿಸುವುದು ಪರಿಷತ್ತಿನ ಧ್ಯೇಯೋದ್ದೇಶಗಳಲ್ಲೊಂದಾಗಿದೆ. ಕಾರ್ಯಾಗಾರ ಕಮ್ಮಟಗಳನ್ನು ನಡೆಸುವುದು. ಪಿಎಚ್.ಡಿ. ಮಾಡುವವರಿಗೆ ಮಾರ್ಗದರ್ಶನ, ನೆರವು ನೀಡಲಾಗುತ್ತಿದೆ.

ಏಕವ್ಯಕ್ತಿ ಮಾಡಬಹುದಾದ **ಕಿರು ಸಂಶೋಧನಾ ಯೋಜನೆ**ಗಳಿಗೆ ಪ್ರೋತ್ಸಾಹ ನೀಡುವುದು. ಈ ಯೋಜನೆಗೆ ಪದವಿಪೂರ್ವ ಹಾಗೂ ಪದವಿ ಕಾಲೇಜಿನ ಅಧ್ಯಾಪಕರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಭಾಷಾ ಅಧ್ಯಾಪಕರು, ಆಸಕ್ತಿಯಿರುವ ಮಾನವಿಕ ವಿಭಾಗದ ಆಸಕ್ತ ಅಧ್ಯಾಪಕರನ್ನು ಆಹ್ವಾನಿಸಿ ಸಂಶೋಧನೆಯಲ್ಲಿ ತೊಡಗಿಸುವುದು. ಅಂತರ್ ಶಿಸ್ತೀಯ ಅಧ್ಯಯನ, ದೇಶೀಯ ಅಧ್ಯಯನ ಮುಂತಾದ ಸಾಂಪ್ರದಾಯಿಕ ಹಾಗೂ ಮೂಲಭೂತ ವಿಷಯಗಳ ಅಧ್ಯಯನಕ್ಕೆ ಉತ್ತೇಜನ ನೀಡುವುದು ಹಾಗೂ ಈ ಕ್ಷೇತ್ರದಲ್ಲಿ ಅಧ್ಯಯನಾಸಕ್ತರಾದವರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು. ಈ ಯೋಜನೆಗೆ ಆಸಕ್ತ ನಿವೃತ್ತ ಅಧ್ಯಾಪಕರು, ವಿದ್ವಾಂಸರ ನೆರವನ್ನು, ಮಾರ್ಗದರ್ಶನವನ್ನು ಪಡೆಯುವುದು.

ಸಂಶೋಧನೆ ಎಂದರೆ ವಿಶ್ವವಿದ್ಯಾನಿಲಯದವರಿಗಷ್ಟೆ ಸೀಮಿತ ಎನ್ನುವುದನ್ನು ಹೋಗಲಾಡಿಸಿ, ಇದರ ಹೊರತಾಗಿಯೂ ಸಂಶೋಧನೆಗೆ ಮುಕ್ತ ಅವಕಾಶಗಳು ಇವೆ ಎನ್ನುವುದನ್ನು ಸಾಬೀತು ಪಡಿಸುವುದು. ಈ ಹಿನ್ನೆಲೆಯಲ್ಲಿ **'ಸಂಶೋಧನಾ ಮಾಹಿತಿ ಕೇಂದ್ರ'**ವನ್ನು ತೆರೆಯಲಾಗಿದೆ.

## ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್ – ಹಂಪಿ ವಿಶ್ವವಿದ್ಯಾಲಯ

## ಮಾನ್ಯತಾ ಸಂಸ್ಥೆ : ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದೊಂದಿಗೆ ಮಾನ್ಯತೆ ಪಡೆದು(ನೋಂದಣಿ) ಎಂ.ಫಿಲ್, ಪಿಎಚ್.ಡಿ. ಕೋರ್ಸ್‌ಗಳನ್ನು ೨೦೧೧–೧೨ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಯಿತು.

೨೦೧೧ನೇ ಸಾಲಿನಿಂದ ಪಿಎಚ್.ಡಿ. ಕೋರ್ಸ್ ಸಹ ಪ್ರಾರಂಭವಾಗಿದ್ದು ಇಲ್ಲಿಯವರೆಗೆ **೧೮ ಮಂದಿ ವಿದ್ಯಾರ್ಥಿಗಳು** ಪಿಚ್.ಡಿ. ಪದವಿಯನ್ನು ಪಡೆದಿರುತ್ತಾರೆ.

**೨೦೧೧ನೇ ಸಾಲಿನಿಂದ  ಇಲ್ಲಿಯವರೆಗೂ ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿಗಳ ವಿವರ**

೧. ವಜ್ರೇಶ್ವರಿ ಎಸ್.ಮೂರ್ತಿ ಡಿ.ಸಿ. (೨೦೧೧–೧೨)
೨. ರಾಮಕೃಷ್ಣಪ್ಪ ಎಚ್.ಕೆ. (೨೦೧೨–೧೩)
೩. ರವಿಶಂಕರ್ ಜೆ. (೨೦೧೨–೧೩)
೪. ಮಾಧುಪ್ರಸಾದ ಕೆ. (೨೦೧೩–೧೪)
೫. ಗಿರಿಜಾದೇವಿ ಎಲ್.ಎನ್. (೨೦೧೩–೧೪)
೬. ಅರುಣಾಕುಮಾರಿ (೨೦೧೪–೧೫)
೭. ರಾಘವೇಂದ್ರ ಬಿ.ಎ.(೨೦೧೫–೧೬)
೮. ಕುಸುಮ ಸಿ.ಆರ್. (೨೦೧೬–೧೭)
೯. ರೂಪ ಎಸ್. (೨೦೧೬–೧೭)
೧೦. ತಿಪ್ಪೇಸ್ವಾಮಿ ಆರ್. (೨೦೧೬–೧೭)
೧೧. ಶಿವಕುಮಾರ ಡಿ.ಸಿ. (೨೦೧೬–೧೭)
೧೨. ಪ್ರೇಮ (೨೦೧೬–೧೭)
೧೩. ಭಾಗ್ಯಮ್ಮ ಜಿ. (೨೦೧೬–೧೭)
೧೪. ಸಂಗಪ್ಪ ಉಪಾಸೆ (೨೦೧೬–೧೭)
೧೫. ಶಬೀನಾ (೨೦೧೬–೧೭)
೧೬. ಮಹೇಶ್ವರಿ ಜಿ.ಬಿ. (೨೦೧೭–೧೮)
೧೭. ಚಂದ್ರಶೇಖರ ಎಂ. (೨೦೧೭–೧೮)
೧೮. ಪ್ರತಿಮಾ ಎಂ.ಸಿ. (೨೦೧೮–೧೯)

**ಪಿಎಚ್.ಡಿ. ಅಧ್ಯಯನ ನಡೆಸುತ್ತಿರುವವರ ವಿವರ :**

**೨೦೧೭–೧೮ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳು**

೧. ಪ್ರತಾಪ್ ಪಿ.
೨. ಆನಂದ ವಿ.

೩. ಮಂಜುನಾಥ ಸಿ.

೪. ಶಿಲ್ಪ ಕೆ.ಎಸ್.

೫. ಗಂಗರೇವಯ್ಯ ಎಸ್.ಸಿ.

**೨೦೧೮-೧೯ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳು**

೧. ಈರಪ್ಪ ಮಹಾಲಿಂಗಪೂರ

೨. ಎಲ್ಲಪ್ಪ ಜಿ. (ಪಿಎಚ್.ಡಿ. ಅಂತಿಮ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿರುತ್ತಾರೆ)

೩. ಕೇಶವ

೪. ಗೋಪಾಲ ಜಿ.ಎಂ. (ಪಿಎಚ್.ಡಿ. ಅಂತಿಮ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿರುತ್ತಾರೆ)

೫. ಗೀತಾ ಡಿ. (ಪಿಎಚ್.ಡಿ. ಅಂತಿಮ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿರುತ್ತಾರೆ)

೬. ಚಿಕ್ಕಣ್ಣ ಬಿ.ಎಸ್. (ಪಿಎಚ್.ಡಿ. ಅಂತಿಮ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿರುತ್ತಾರೆ)

೭. ಜಗದೀಶ್ ಎಸ್.

೮. ದಿವಾಕರ ಎಂ.

೯. ಮರಿಯಂಬಿ

೧೦. ವಸುಂಧರಾ ಕೆ.ಎಂ. (ಪಿಎಚ್.ಡಿ. ಅಂತಿಮ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿರುತ್ತಾರೆ)

೧೧. ವೀಣಾ ಹೆಚ್.ಎಸ್.

**೨೦೨೨-೨೩ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳು**

೧೬. ಯತೀಶ್ ಕುಮಾರ್

೧೭. ಶಿಲ್ಪ ಬಿ.ಜೆ.

೧೮. ಲಕ್ಷ್ಮಿ ಎಸ್. ಕುಲಕರ್ಣಿ

೧೯. ತುಕ್ಕಪ್ಪ

೨೦. ಮುರಳಿ ಜಿ.

೨೧. ಹರೀಶ್ ಐ.ವಿ.

**೨೦೧೨-೧೩ ರಿಂದ ೨೦೧೮-೧೯ರವರೆಗೆ ಅಧ್ಯಯನ ನಡೆಸಿದ ೩೫ ಎಂ.ಫಿಲ್. ವಿದ್ಯಾರ್ಥಿಗಳ ವಿವರ**

೧. ರಾಘವೇಂದ್ರ ಎಸ್.ಎಸ್.,

೨. ವೀರಭದ್ರಯ್ಯ ಸಿ.ವಿ.

೩. ರೇವಣ್ಣಗೌಡ ಕೆ.ಎಸ್.,

೪. ರಾಘವೇಂದ್ರ ಬಿ.ಎ.

೫. ರಮೇಶ್‌ಕುಮಾರ್ ಎಂ.

೬. ಜೆ.ಕೆ. ಕೃಷ್ಣ

೭. ಗಂಗರೇವಯ್ಯ ಎಸ್.ಸಿ.

೮.	ನಾಗೇಶ್ ಎನ್.
೯.	ಭಾಗ್ಯಮ್ಮ ಜಿ.
೧೦.	ರಶ್ಮಿ ಆರ್.
೧೧.	ವಾಣಿ ವಿ
೧೨.	ಎಸ್. ರಾಧಿಕ
೧೩.	ಹನುಮಂತರಾಯ ಟಿ.
೧೪.	ಭಾಸ್ಕರ್ ವೈ.
೧೫.	ಮಂಜುಳ ಪಿ.
೧೬.	ವರಲಕ್ಷ್ಮಿ ಸಿ.
೧೭.	ಹೆಚ್.ಎಸ್. ವೀಣಾ
೧೮.	ಮಮತ ವಿ.
೧೯.	ಯಶಸ್ವಿನಿ ಕೆ.ಆರ್.
೨೦.	ಅಶೋಕ್‌ಕುಮಾರ್ ಬಿ.ಎಸ್.
೨೧.	ಈರಪ್ಪ ಮಹಾಲಿಂಗಪೂರ
೨೨.	ಕಿಮ್‌ಶುಖ ಈ.ಪಿ.
೨೩.	ನರಸಿಂಹ ಎಸ್.ಎನ್.
೨೪.	ಪುನೀತ್‌ಕುಮಾರ್ ಎಲ್.
೨೫.	ಮಂಜುನಾಥ ಕೆ.
೨೬.	ರಮೇಶ್ ಈ.
೨೭.	ವಿನೋದ
೨೮.	ಹರೀಶ್ ಐ.ವಿ.
೨೯.	ಲಕ್ಷ್ಮೀ ಸಿ.
೩೦.	ಕಾಂತರಾಜು
೩೧.	ಪುಷ್ಪ ಎಂ.
೩೨.	ಕಿರಣ್‌ಕುಮಾರ ಆರ್.
೩೩.	ಶಶಿರೇಖ
೩೪.	ಕೃಷ್ಣಪ್ಪ ಕೆ.ಎನ್.
೩೫.	ಸುರೇಶ ಹೊಸಮನಿ

ಪ್ರಸ್ತುತ ಯು.ಜಿ.ಸಿ. ರೂಪಿಸಿರುವ ನಿಯಮದಂತೆ ಎಂ.ಫಿಲ್. ಪದವಿಯನ್ನು ನಿಲ್ಲಿಸಲಾಗಿದೆ. (ಯು.ಜಿ.ಸಿ. ಸಾರ್ವಜನಿಕ ಪ್ರಕಟಣೆಯ ಸಂಖ್ಯೆ: F9-83/2023(PS/Misc.) Dated: 26th Dec. 2023 ರಲ್ಲಿ ತಿಳಿಸಲಾಗಿದೆ.

* * * *

## ೨೦೨೨-೨೩ನೇ ಸಾಲಿನ, ಶಾಸನ ತರಗತಿಗಳ ಕ್ಷೇತ್ರಕಾರ್ಯದ ವರದಿ

ಶಾಸನ ತರಗತಿ ವಿದ್ಯಾರ್ಥಿಗಳನ್ನು ಅವರ ಶಾಸನ ಅಧ್ಯಯನ ಮತ್ತು ಜ್ಞಾನ ವಿಸ್ತರಣೆಗಾಗಿ, ಶಾಸನ ಪಡಿಯಚ್ಚು ತಗೆಯುವ ಪ್ರಾತ್ಯಕ್ಷಿತೆಗಾಗಿ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ: ೨೦೨೩ರ ಜುಲೈ ೨೯ ಹಾಗೂ ೩೦ರಂದು ಎರಡು ದಿನಗಳ ಕ್ಷೇತ್ರಕಾರ್ಯ ಹಮ್ಮಿಕೊಳ್ಳಲಾಯಿತು. ಪೂರ್ವನಿಗಧಿಯಾದಂತೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ, ಭಾರತ ಸರ್ಕಾರ ಪುರಾತತ್ವ ಇಲಾಖೆ ಮತ್ತು ಶ್ರವಣಬೆಳಗೊಳ ಜೈನಮತದ ಅಧಿಕಾರಿಗಳಲ್ಲಿ ಸೂಕ್ತ ವ್ಯವಸ್ಥೆಗಾಗಿ ಪತ್ರ ವ್ಯವಹಾರ ನಡೆಸಿ ಕೋರಲಾಗಿತ್ತು.

ಮೊದಲ ದಿನ ಬೆಂಗಳೂರಿನಿಂದ ಬಸ್ಸಿನಲ್ಲಿ ಬೆಳಿಗ್ಗೆ ೭:೦೦ಗಂಟೆಗೆ ಹೊರಟು ಚನ್ನರಾಯಪಟ್ಟನದ ಚಂದ್ರಮೌಳೇಶ್ವರ ದೇವಾಲಯಕ್ಕೆ ಭೇಟಿ ನೀಡಲಾಯಿತು. ಶಾಸನ ತರಗತಿಯ ಉಪಾಧ್ಯಾಯರುಗಳಾದ, **ಡಾ. ಲಲಿತಾಂಬ ಎನ್.ಆರ್, ಡಾ. ಸ್ಮಿತಾರೆಡ್ಡಿ,** ಇವರುಗಳು ವಿದ್ಯಾರ್ಥಿಗಳಿಗೆ ದೇವಾಲಯದ ಬಗ್ಗೆ ಮಾಹಿತಿಯನ್ನು ನೀಡಿದರು. ಅಲ್ಲಿರುವ ಶಾಸನವನ್ನು ವಿದ್ಯಾರ್ಥಿಗಳಿಂದ ಓದಿಸಿದರು. ಅಲ್ಲಿಂದ ನುಗ್ಗೆಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿನರಸಿಂಹ ದೇವಾಲಯಕ್ಕೆ ಭೇಟಿಕೊಟ್ಟು, ಅಲ್ಲಿನ ದೇವಾಲಯದ ಶಿಲ್ಪಸ್ವಾರಸ್ಯವನ್ನು ವಿದ್ಯಾರ್ಥಿಗಳಿಗೆ ವಿವರಿಸಿ, ಶಿಲ್ಪದಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಸ್ವಾರಸ್ಯಗಳನ್ನು ಮಕ್ಕಳಿಗೆ ಗುರುತಿಸಲು ಸೂಚಿಸಲಾಯಿತು.  ದಿಂಡಗೂರು ಗ್ರಾಮದ ದೇವಾಲಯಗಳಿಗೆ ಭೇಟಿಕೊಟ್ಟು, ಗಂಗರ ಕಾಲದ ದೇವಾಲಯಗಳ ಬಗ್ಗೆ ಮಾಹಿತಿ ತಿಳಿಸಲಾಯಿತು. ಅಲ್ಲಿಂದ ಸುತ್ತಮುತ್ತಲಿನ ದೇವಾಲಯಗಳಿಗೆ ಭೇಟಿಕೊಟ್ಟು, ಶ್ರವಣಬೆಳಗೊಳಕ್ಕೆ ತಲುಪಿದೆವು. ಅಲ್ಲಿಂದ ಚಿಕ್ಕಬೆಟ್ಟದ ಬಾಹುಬಲಿಯ ಬಗ್ಗೆ ತಿಳಿಯಲು ಭೇಟಿ ನೀಡಿದೆವು.

ಚಿಕ್ಕಬೆಟ್ಟದ ಬಾಹುಬಲಿಯನ್ನು ವೀಕ್ಷಿಸಿ, ಅಲ್ಲಿರುವ ಬೊಪ್ಪಣ್ಣ ಕವಿಯ ಗೊಮ್ಮಟಸ್ತುತಿಯನ್ನು ಡಾ. ಲಲಿತಾಂಬ ಅವರು ಹಾಡು ಹೇಳಿ, ಪಾಠ ಮಾಡಿದ್ದಲ್ಲದೆ ವಿದ್ಯಾರ್ಥಿಗಳಿಂದ ಓದಿಸಲಾಯಿತು. ಡಾ. ಸ್ಮಿತಾರೆಡ್ಡಿಯವರು ಲಿಪಿಯ ಕಾಲಮಾನವನ್ನು ವಿದ್ಯಾರ್ಥಿಗಳಿಗೆ ವಿವರಿಸಿ ಓದಿಸಿದರು. ಶ್ರವಣಬೆಳಗೊಳದಲ್ಲಿ ವಾಸ್ತವ್ಯ.

ದಿನಾಂಕ: ೩೦-೭-೨೦೨೩ರಂದು ಬೆಳಿಗ್ಗೆ ೬.೩೦ಕ್ಕೆ ಕ್ಷೇತ್ರಕಾರ್ಯಕ್ಕೆ ಜಿನನಾಥಪುರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಪಡಿಯಚ್ಚು ತಗೆಯುವುದರ ಬಗ್ಗೆ ಪ್ರೊ. ದೇವರಾಜಸ್ವಾಮಿಯವರು ಮಾಹಿತಿಯನ್ನು ನೀಡಿದರು. ಡಾ. ಲಲಿತಾಂಬ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಪಡಿಯಚ್ಚನ್ನು ತೆಗೆದರು. ಡಾ. ಸ್ಮಿತಾರೆಡ್ಡಿಯವರು ಶಾಸನದ ಲಿಪಿಯ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಅಲ್ಲಿಂದ ಚಂದ್ರಗಿರಿಗೆ ಹೊರಟು, ಚಾವುಂಡರಾಯನ ಶಾಸನವನ್ನು ಓದಿಸಿದರು. ಶಿವಮಾರನ ಬಸದಿ ಶಾಸನವು ಮಣ್ಣಿನಲ್ಲಿ ಹೂತುಹೋಗಿತ್ತು, ಅದನ್ನು ಡಾ. ಲಲಿತಾಂಬ ಅವರು ಈ ಮೊದಲೇ ವೀಕ್ಷಿಸಿದ್ದರಿಂದ, ವಿದ್ಯಾರ್ಥಿಗಳಿಂದ ಮಣ್ಣನ್ನು ತೆಗೆಸಿ ಶುಚಿಗೊಳಿಸಿ, ಸುತ್ತಲೂ ಕಲ್ಲನ್ನು ಇಟ್ಟು ಸಂರಕ್ಷಿಸಲಾಯಿತು. ಪುರಾತತ್ವ ಇಲಾಖೆಯ ಸಿಬ್ಬಂದಿಗೆ ಅದನ್ನು ಸಂರಕ್ಷಣೆ ಮಾಡಲು ತಿಳಿಸಲಾಯಿತು.

ಅಲ್ಲಿಂದ ಭಂಡಾರ ಬಸದಿಗೆ ಬಂದು ಬುಕ್ಕರಾಯನ ಶಾಸನದ ಬಗ್ಗೆ ವಿವರಣೆ ನೀಡಿದ್ದಲ್ಲದೆ, ವಿದ್ಯಾರ್ಥಿಗಳಿಂದ ಓದಿಸಲಾಯಿತು. ಇತರೆ ಶಾಸನಗಳು, ಶಿಲ್ಪಗಳು, ೨೪ ತೀರ್ಥಂಕರರ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ನಂತರ ಸವತಿಗಂಧವಾರಣ ಬಸದಿ, ನಕರ ಜಿನಾಲಯ, ಅಕ್ಕನ ಬಸದಿಯನ್ನು ನೋಡಿಕೊಂಡು, ಅಲ್ಲಿಂದ ಬೆಂಗಳೂರಿಗೆ ಹಿಂದಿರುಗಿದೆವು.

ಈ ಪ್ರವಾಸದ ಅನುಭವದ ಕ್ಷೇತ್ರಕಾರ್ಯದ ಮೂಲಕ ಶಾಸನ ವಿದ್ಯಾರ್ಥಿಗಳು, ಲಿಪಿ, ಪಠ್ಯಗಳ ಅಧ್ಯಯನದ ಬಗ್ಗೆ, ಪಡಿಯಚ್ಚುಗಳನ್ನು ತೆಗೆದು ಓದುವುದನ್ನು, ಪರೀಕ್ಷಿಸುವ ಅನುಭವವನ್ನು ಗಳಿಸಿದರು. ಈ ಹಿನ್ನೆಲೆಯಲ್ಲಿ ಕ್ಷೇತ್ರ ಕಾರ್ಯವು ವಿದ್ಯಾರ್ಥಿಗಳಲ್ಲಿ ಶಾಸನ ಕ್ಷೇತ್ರದ ಜ್ಞಾನ ಹೆಚ್ಚಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಶಾಸನ ತರಗತಿಗೆ ಹಾಗೂ ಕ್ಷೇತ್ರಕಾರ್ಯಗಳಿಗೆ ವ್ಯವಸ್ಥೆ ಹಾಗೂ ಉತ್ತೇಜನ ನೀಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿಯವರಿಗೂ, ಪದಾಧಿಕಾರಿಗಳಿಗೂ ಹಾಗೂ ಸಂಬಂಧಪಟ್ಟ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

### ಶ್ರವಣಬೆಳಗೊಳ ಕ್ಷೇತ್ರಕಾರ್ಯದಲ್ಲಿ ಭಾಗವಹಿಸಿದವರು

**ಉಪಾಧ್ಯಾಯರುಗಳು**

೧. ಡಾ. ಲಲಿತಾಂಬ ಎನ್. ಆರ್.

೨. ಡಾ. ಸ್ಮಿತಾರೆಡ್ಡಿ

**ವಿದ್ಯಾರ್ಥಿಗಳು**

೧. ಅಮರೇಶ್. ಜಿ.
೨. ಕೃಷ್ಣಪ್ಪ ಹೆಚ್. ಖಾನಾಪುರ
೩. ಕಿರಣ್ ಕುಮಾರ್ ಪಿ.ಎಲ್.
೪. ಡಾ. ಚಂದ್ರಶೇಖರ್ ಎಂ.
೫. ನಂದ ಪ್ರಕಾಶ
೬. ರಂಗನಾಥ್ ಬಿ. ಆರ್.
೭. ರಾಮಕೃಷ್ಣ ಎಸ್.
೮. ಶಾರದಾ ರವೀಂದ್ರ ಕಾಟೋಟಿ
೯. ನಾಗರಾಜ್
೧೦. ವಸುಂಧರ

**೨೦೨೧-೨೨ನೇ ಸಾಲಿನ ವಿದ್ಯಾರ್ಥಿಗಳು**

೧. ಲಕ್ಷ್ಮಿ ಎಸ್. ಕುಲಕರ್ಣಿ
೨. ಅಶೋಕ್
೩. ಮಂಜುನಾಥ

## ೬. ಮುದ್ರಣಾಲಯ ವಿಭಾಗ:

### ಮುದ್ರಣಾಲಯ ಸ್ಥಾಪನೆ

ಪರಿಷತ್ತಿನ ಪ್ರಕಟಣೆಗಳ, ನಿಯತಕಾಲಿಕೆಗಳ ಹಾಗೂ ಇತರ ಸಾಹಿತ್ಯದ ಮುದ್ರಣಕ್ಕಾಗಿ ಸ್ವಂತ ಮುದ್ರಣಾಲಯವೊಂದಿರಬೇಕೆಂದು ಮನಗಂಡ ಬಿ.ಎಂ.ಶ್ರೀಕಂಠಯ್ಯರವರು ಅಚ್ಚುಕೂಟದ ಸ್ಥಾಪನೆಗಾಗಿ ಅಪಾರವಾಗಿ ಶ್ರಮಿಸಿದರು. ೧೯೩೯ರಲ್ಲಿ ಅವರು ಐದು ಸಾವಿರ ರೂಪಾಯಿಗಳನ್ನು ತಾವೇ ನೀಡಿದರು. ಮಾರನೇ ವರುಷ ಇನ್ನೊಂದು ಸಾವಿರ ನೀಡಿದರು. ೧೨೦೦ ರೂಪಾಯಿಗಳ ವೆಚ್ಚದಲ್ಲಿ ಮುದ್ರಣಾಲಯಕ್ಕಾಗಿ ೧೯೪೦ರಲ್ಲಿ ಒಂದು ಕಟ್ಟಡ ನಿರ್ಮಾಣವಾಯಿತು. (ಕಾಲಕ್ರಮದಲ್ಲಿ ಅದನ್ನು ವಿಸ್ತರಿಸಲಾಗಿದೆ.) ಮುದ್ರಣ ಕಲೆಯಲ್ಲಿ ನಿಷ್ಣಾತರಾಗಿ ಮೈಸೂರು ಸರಕಾರದ ಮುದ್ರಣಾಲಯದ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಬಿ. ಪುಟ್ಟಯ್ಯನವರು ಪರಿಷತ್ತಿನ ಅಚ್ಚುಕೂಟದ ಸ್ಥಾಪನೆಗೆ ಪೂರ್ಣ ನೆರವು ನೀಡಿದರು. ಅಲ್ಲದೇ ಅದರ ಗೌರವ ಮೇಲ್ವಿಚಾರಕರಾಗಿ ದುಡಿದು ಅಚ್ಚುಕೂಟವನ್ನು ಸುವ್ಯವಸ್ಥಿತ ರೀತಿಯಲ್ಲಿ ಕಟ್ಟಿ ಬೆಳೆಸಿದರು. ಬಿ.ಎಂ.ಶ್ರೀ. ಅವರು ಮುದ್ರಣಾಲಯವನ್ನು 'ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ' ಎಂದು ಕರೆದರು. ಪರಿಣಿತರಾದ ಗೌರವ ಮೇಲ್ವಿಚಾರಕರ ಆಡಳಿತದಡಿಯಲ್ಲಿ ಅಚ್ಚುಕೂಟ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆಗೊಳಿಸಲಾಯಿತು. ಆ ಏರ್ಪಾಟು ಬಹಳ ಕಾಲ ಮುಂದುವರಿಯಿತು.

ಬಿ.ಎಂ.ಶ್ರೀ. ಅವರ ಅಧಿಕಾರಾವಧಿಯ ನಂತರ ಅದಕ್ಕೆ 'ಬಿ.ಎಂ.ಶ್ರೀ. ಅಚ್ಚುಕೂಟ' ಎಂದು ಮರುನಾಮಕರಣ ಮಾಡಲಾಯಿತು. ಅಚ್ಚುಕೂಟ ಆಧುನೀಕರಣಗೊಂಡು ಇಂದಿಗೂ ಆ ಹೆಸರಿನಲ್ಲಿಯೇ ಮುಂದುವರಿದಿದೆ.

ಮುದ್ರಣಾಲಯ, ಮಹಿಳಾಶಾಖೆ, 'ಕನ್ನಡ ನುಡಿ' ಪತ್ರಿಕೆ ಹಾಗೂ ಸಾಹಿತ್ಯ ಪರೀಕ್ಷೆಗಳ ಆರಂಭ, ಕನ್ನಡದ ಬಾವುಟದಂತಹ ಮಹತ್ವದ ಪುಸ್ತಕ ಪ್ರಕಟಣೆ, ಬೆಳ್ಳಿಹಬ್ಬ ಆಚರಣೆ ಮುಂತಾದ ದೂರದರ್ಶಿತ್ವ ಕಾರ್ಯಗಳಿಂದ, ಬಿ.ಎಂ.ಶ್ರೀ. ಅವರ ಅವಧಿಯಲ್ಲಿ ಪರಿಷತ್ತಿಗೆ ಒಂದು ಭದ್ರ ಬುನಾದಿ ದೊರೆಕಿತು.

ಪ್ರಸ್ತುತ ಅವಶ್ಯಕ ಸಿಬ್ಬಂದಿಗಳು ಅಚ್ಚುಕೂಟದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪರಿಷತ್ ವತಿಯಿಂದ ಪ್ರಕಟಣೆಗೊಳ್ಳುವ ಪುಸ್ತಕಗಳ ಮುದ್ರಣಕಾರ್ಯವು ಯಶಸ್ವಿಯಾಗಿ ನಡೆಯುತ್ತಿದ್ದು, ಪುಸ್ತಕಗಳು ಪ್ರಕಟಣೆಗೊಳ್ಳುತ್ತಿವೆ.

## ೭. ಪ್ರಕಟಣಾ ಮತ್ತು ಮಾಧ್ಯಮ ವಿಭಾಗ:

### ಪ್ರಕಟಣಾ ವಿಭಾಗ

**ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಆರಂಭವಾಯಿತು.** ಪರಿಷತ್ತಿಗೆ ಆರಂಭದ ವರ್ಷದಲ್ಲಿ ಯಾವುದೇ ಪ್ರಕಟಣೆಯನ್ನೂ ಹೊರತರಲು ಆಗಿರಲಿಲ್ಲ. ಕಾರಣ ಅದು ಸ್ಥಿರಗೊಳ್ಳಬೇಕಾಗಿತ್ತು. **೧೯೧೬ರಲ್ಲಿ ಪುಸ್ತಕ ಪ್ರಕಟಣೆಯನ್ನು ಆರಂಭಿಸಿತು. ಪರಿಷತ್ತು ಹೊರತಂದ ಮೊದಲ ಕೃತಿ: ವೈ.ಕೆ. ರಾಮಚಂದ್ರರಾವ್ ಅವರು ಕನ್ನಡಕ್ಕೆ ಅನುವಾದಿಸಿದ 'ಜೇಮ್ಸ್ ಏಬ್ರಾಮ್ ಗಾರ್ಫೀಲ್ಡ್ ಚರಿತೆ'.** ಅನಂತರ, ಅದರ ಪ್ರಕಟಣೆಗಳು ಒಂದೊಂದಾಗಿ ಹೊರಬಂದವು. **ಪರಿಷತ್ತು ಇದುವರೆಗೆ ಸುಮಾರು ೧೮೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ.** ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ಇಂಗ್ಲಿಷ್ ಕೃತಿಗಳೂ ಇದರಲ್ಲಿ ಸೇರಿವೆ. ಇವುಗಳಲ್ಲಿ ಹಲವು ಮರುಮುದ್ರಣಗಳನ್ನು ಕಂಡು ದಾಖಲೆ ಸ್ಥಾಪಿಸಿವೆ.

ಹಲವಾರು ಹಳಗನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ ಗದ್ಯಾನುವಾದ ಮಾಡಿರುವುದು ಪರಿಷತ್ತಿಗೆ ಅನನ್ಯತೆಯನ್ನು ನೀಡಿದೆ. ಇದರಿಂದಾಗಿ ಶ್ರೀಸಾಮಾನ್ಯ ಓದುಗರೂ ಸಹ ಅದರ ಸಾರ ಮತ್ತು ಸತ್ತ್ವವನ್ನು ಪರಿಚಯಿಸಿಕೊಳ್ಳುವಂತಾಯಿತು. ಬೆಳ್ಳಿ ಬಿಟ್ಟ ಬಳ್ಳಿ ಮಾಲೆ ೧೦೮ ಕೃತಿಗಳು, ವಿವಿಧ ನಿಘಂಟುಗಳು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು, ದಲಿತ ಸಾಹಿತ್ಯ ಸಂಪುಟಗಳು, ಮಹಿಳಾ ಸಾಹಿತ್ಯ ಸಂಪುಟಗಳು, ಜಿಲ್ಲಾ ಕಥಾ ಸಂಕಲನಗಳು, ಜೀವನ ಚರಿತ್ರೆ, ಮಕ್ಕಳ ಪುಸ್ತಕಗಳು, ಸ್ಮರಣ ಸಂಚಿಕೆಗಳು, ಮಹಿಳಾ ಮಾಲೆ... ಇವೆಲ್ಲಾ ಪರಿಷತ್ತಿನ ಹೆಮ್ಮೆಯ ಪ್ರಕಟಣೆಗಳಾಗಿವೆ.

ಪರಿಷತ್ತಿನಿಂದ ಪ್ರಕಟಣೆ ಮತ್ತು ಪ್ರಕಾಶನಗೊಳ್ಳುವ ಗ್ರಂಥಗಳ ಮುದ್ರಣ ವೆಚ್ಚದ ಸಂಬಂಧವಾಗಿ, ದಾನಿಗಳಿಂದ **'ಗ್ರಂಥ ದಾಸೋಹ'** ಎಂದು ದೇಣಿಗೆ ಸ್ವೀಕರಿಸಲಾಗುತ್ತದೆ. ಎಷ್ಟು ಪುಟಗಳ, ಎಷ್ಟು ಪ್ರತಿಗಳ ಮುದ್ರಣ ವೆಚ್ಚವಾಗಿ ಎಷ್ಟು ಮೊತ್ತದ ಹಣವನ್ನು **'ಗ್ರಂಥ ದಾಸೋಹ'** ಎಂದು ಸ್ವೀಕರಿಸಬೇಕು – ಎಂಬ ಬಗ್ಗೆ ಸೂಕ್ತ ನಿಯಮಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ರಚಿಸಿ, ಅವುಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದುಕೊಳ್ಳುತ್ತದೆ. ಹಾಗೂ ಆಯಾ ಗ್ರಂಥದಲ್ಲಿ ಗ್ರಂಥ ದಾಸೋಹಿಗಳ ಭಾವಚಿತ್ರದೊಂದಿಗೆ, ಗ್ರಂಥ ದಾಸೋಹದ ಉದ್ದೇಶದ ಉಲ್ಲೇಖ ಇರುತ್ತದೆ.

ಪ್ರಕಟಣೆಗಳ ಸಂಬಂಧವಾಗಿ ಪರಿಷತ್ತು ತಾನು ಆಯೋಜಿಸುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಆಯಾ ಸಮ್ಮೇಳನದ ಸಂಖ್ಯೆಯಷ್ಟು ಕೃತಿಗಳ ಪ್ರಕಟಣೆಯನ್ನು ೧೯೯೯ರಿಂದ ಆರಂಭಿಸಿತು. ಆಗ ಕನಕಪುರದಲ್ಲಿ ನಡೆದ ಸಮ್ಮೇಳನದಲ್ಲಿ ೬೬ ಕೃತಿಗಳನ್ನು ಮೊದಲಬಾರಿಗೆ ಹೊರತಂದಿತು. ಅನಂತರ ಹಲವು ಸಮ್ಮೇಳನಗಳ ಸಂದರ್ಭದಲ್ಲಿ ಈ ವಾಡಿಕೆ ಮುಂದುವರೆದು ೨೦೨೨ರಲ್ಲಿ ಹಾವೇರಿಯಲ್ಲಿ ನಡೆದ ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಷ್ಟೇ ಸಂಖ್ಯೆಯ ಕೃತಿಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕನ್ನಡ ಪ್ರವೇಶ, ಕನ್ನಡ ಕಾವ, ಕನ್ನಡ ಜಾಣ, ಕನ್ನಡ ರತ್ನ ಪರೀಕ್ಷೆಗಳ ಎಲ್ಲ ಪಠ್ಯಪುಸ್ತಕಗಳನ್ನೂ ಇದೀಗ ಪರಿಷತ್ತೇ ಪ್ರಕಟಿಸುತ್ತಿದೆ. ಹಾಗಾಗಿ ಈಗ ಪಠ್ಯಪುಸ್ತಕಗಳು ಅಲಭ್ಯ ಎಂಬ ದೂರಿಗೆ ಆಸ್ಪದವಿಲ್ಲದಂತಾಗಿದೆ.

ಪರಿಷತ್ತು ೧೦೮ ವರ್ಷಗಳಿಂದ ವಿದ್ವತ್ಪೂರ್ಣವಾದ ಸಂಶೋಧನಾತ್ಮಕ ಷಾಣ್ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಪತ್ರಿಕೆಯ ಮೊದಲ ಸಂಪುಟವನ್ನು 'ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ' ಎಂಬ ಹೆಸರಿನಲ್ಲಿ ೧೯೧೬ ಏಪ್ರಿಲ್ ತಿಂಗಳಲ್ಲಿ ಪ್ರಕಟ ಮಾಡಲಾಗಿತ್ತು. ಪ್ರಸ್ತುತ, **'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ'** ಎಂಬ ಹೆಸರಿನಲ್ಲಿ ನಿರಂತರವಾಗಿ ಪ್ರಕಟವಾಗುತ್ತ ಬಂದಿದೆ.

ಪರಿಷತ್ತಿನ ವಾರ್ತಾಪತ್ರ **'ಕನ್ನಡನುಡಿ'** ಪತ್ರಿಕೆ ತನ್ನ ಪ್ರಕಟಣೆಯನ್ನು ಆರಂಭಿಸಿದ್ದು ೧೯೩೮ರ ಅಕ್ಟೋಬರ್ ೪ರಂದು. ಈಗಲೂ ಈ ನಿಯತಕಾಲಿಕೆ ತನ್ನ ನಿರಂತರತೆಯನ್ನು ಕಾಯ್ದುಕೊಂಡಿದೆ. ಪ್ರಸ್ತುತ, ೨೦೨೩ರಿಂದ ಅದರ ಡಿಜಿಟಲ್ ಆವೃತ್ತಿ ಪ್ರಕಟಗೊಳ್ಳುತ್ತಿದ್ದು, ಪರಿಷತ್ತಿನ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುತ್ತಿದೆ.

ಪರಿಷತ್ತಿನ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳೂ ಅನೇಕ ಕೃತಿಗಳನ್ನು ಪ್ರಕಟಿಸಿವೆ. ಅವು ನಡೆಸುವ ಸಾಹಿತ್ಯ ಸಮ್ಮೇಳನಗಳ ಸಂದರ್ಭಗಳಲ್ಲಿ ಸ್ಮರಣ ಸಂಚಿಕೆಗಳನ್ನು ಹೊರತಂದಿವೆ. ಕೇಂದ್ರ ಪರಿಷತ್ತೂ ಸಹ ಸ್ಮರಣ ಸಂಚಿಕೆಗಳ

ಪ್ರಕಟಣೆಯ ಮೂಲಕ ತಾನು ನಡೆದು ಬಂದ ಹಾದಿಯನ್ನು ದಾಖಲಿಸಿದೆ. ಇವೆಲ್ಲ ಇಂದಿಗೂ ಪರಾಮರ್ಶನಯೋಗ್ಯ ಗ್ರಂಥಗಳು.

ಪ್ರಸ್ತುತ, 'ಯುವ ಸಂಪುಟ' ಹಾಗೂ 'ನಿಘಂಟು ಪರಿಷ್ಕರಣಾ ಕಾರ್ಯ'ಕ್ಕೆ ಹಣ ಬಿಡುಗಡೆ ಮಾಡಲು ಸರ್ಕಾರಕ್ಕೆ ಕ್ರಿಯಾಯೋಜನೆ ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದ ನಂತರ ಸಂಬಂಧಿಸಿದ ಕಾರ್ಯ ಮುಂದುವರಿಸಲಾಗುವುದು. ಮಂಡ್ಯದಲ್ಲಿ ನಡೆಯಲಿರುವ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೮೭ ಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

ಈ ಹಿಂದೆ ಮುದ್ರಣವಾಗಿರುವ ಕೆಲವು ಪುಸ್ತಕಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಗ್ರಾಹಕರ ಬೇಡಿಕೆಗನುಸಾರವಾಗಿ ಪುಸ್ತಕಗಳ ಮರುಮುದ್ರಣ ಕಾರ್ಯವು ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

**ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ವಿಭಾಗ**

ನಿಘಂಟುಗಳನ್ನು ಸಿದ್ದಪಡಿಸುವುದು ಭಾರತೀಯರಿಗೆ ಹೊಸದಲ್ಲ. ಕ್ರಿಸ್ತಪೂರ್ವದಲ್ಲಿಯೇ ನಮ್ಮ ದೇಶದಲ್ಲಿ ನಿಘಂಟುಗಳಿದ್ದವು. ಅಗ್ನಿಪುರಾಣದಲ್ಲಿ ಕೋಶವನ್ನು ರಚಿಸುವ ಕ್ರಮದ ಬಗ್ಗೆ ವಿವರಣೆಗಳಿವೆ. ಇದನ್ನು ಆಧರಿಸಿಯೇ ಅಮರಸಿಂಹನು ನಾಗಲಿಂಗಾನುಶಾಸನವನ್ನು ಸಿದ್ಧಗೊಳಿಸಿದನು. ಅದು ಈಗ ಅಮರಕೋಶವೆಂದು ಪ್ರಸಿದ್ಧವಾಗಿದೆ. ಪದ್ಮನಾಭನ ಭೂರಿ ಪ್ರಯೋಗ, ಹಲಾಯುಧನ ಅಭಿರತ್ನಮಾಲಾ, ಹೇಮಚಂದ್ರನ ಅಭಿದಾನ ಚಿಂತಾಮಣಿ, ಮಥುರೇಶ ಪಂಡಿತನ ಶಬ್ದರತ್ನಾವಳಿ ಹೀಗೆ ಹಲವು ಕೋಶಗಳು ರೂಪುಗೊಂಡವು. ಇವುಗಳು ರಚನೆಯಲ್ಲಿ ಅರ್ಥ, ಪರ್ಯಾಯ ಪದ, ಪದಮೂಲ ಇವನ್ನು ಹೇಳುವುದಕಷ್ಟೇ ಹೆಚ್ಚು ಗಮನ ನೀಡಿದ್ದವು. ಇವತ್ತಿಗೂ ನಿಘಂಟುಗಳ ರಚನೆ ಈ ವ್ಯಾಪ್ತಿಯಲ್ಲಿ ಇರುವುದೇ ಹೆಚ್ಚು, ಅಧ್ಯಯನ ಕ್ರಮದಲ್ಲಿ ಕ್ರಮೇಣ ಅನ್ವೇಷಣೆ, ಸಂಶೋಧನೆ, ಪರಾಮರ್ಶೆ, ತುಲನಾತ್ಮಕ ಚಿಂತನೆ ಇವುಗಳಿಗೆ ಮಹತ್ವ ದೊರೆಯುತ್ತಾ ಹೋದಂತೆ ನಿಘಂಟಿನ ಸಾಧ್ಯತೆಗಳೂ ವಿಸ್ತಾರವಾಗುತ್ತಾ ಹೋದವು. ಈ ಹೊಸ ಅಗತ್ಯಗಳಿಗೆ ಅನುಗುಣವಾಗಿ ಸಂಸ್ಕೃತದಲ್ಲಿ ಸಿದ್ಧವಾದ ಕೋಶಗಳಲ್ಲಿ ಮೊದಲನೆಯದು ರಾಜಾರಾಧಾಕಾಂತದೇವರ 'ಶಬ್ದ ಕಲ್ಪದ್ರುಮ' ಇದರಲ್ಲಿ ಪದಗಳನ್ನು ಹಲವು ಶಾಸ್ತ್ರ ಪರಿಭಾಷೆಯಲ್ಲಿ ವಿವರಿಸಿರುವುದಲ್ಲದೆ ಸಂದರ್ಭಸೂಚಿ, ಪ್ರಯೋಗ ನಿದರ್ಶನ ಮತ್ತು ಅಕರಗಳನ್ನು ಅಳವಡಿಸಲಾಗಿತ್ತು. ಈ ವೇಳೆಗಾಗಲೆ ಸಂಸ್ಕೃತ–ಜರ್ಮನಿ–ಇಂಗ್ಲಿಷ್ ಶಬ್ದಕೋಶ ಪ್ರಕಟವಾಗಿತ್ತು. ಕ್ರಿ.ಶ 1851ರಲ್ಲಿ ಸಿದ್ದವಾದ ಇದು ಮಾದರಿ ಶಬ್ದಕೋಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಇದನ್ನು ಅನುಸರಿಸಿ ಮೊದಲು ಬಂಗಾಳಿಯಲ್ಲಿ ನಂತರ ಹಿಂದಿ, ಮರಾಠಿ, ಮಲೆಯಾಳಂ ಭಾಷೆಗಳಲ್ಲಿ ಶಬ್ದಕೋಶಗಳು ಸಿದ್ದವಾದವು.

ಕನ್ನಡದಲ್ಲಿ ಹತ್ತನೆಯ ಶತಮಾನದ 'ರನ್ನಮಾಲೆ'ಯಿಂದಲೇ ನಿಘಂಟು ಪರಂಪರೆ ಆರಂಭವಾದರೂ ಅದು ವ್ಯಾಪಕವಾಗಿರಲಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ರೀವ್ ಮತ್ತು ಗಿಲ್ ಕ್ರಿಸ್ಟ್ ಪ್ರತ್ಯಾಕವಾಗಿ ಕನ್ನಡ–ಇಂಗ್ಲಿಷ್ ಶಬ್ದಕೋಶ ರಚಿಸಿದ್ದರು. ಕನ್ನಡಕ್ಕೆ ಪೂರ್ಣ ಪ್ರಮಾಣದ ಶಬ್ದಕೋಶದ ಅಗತ್ಯವನ್ನು ಮನಗೊಂಡು ಫರ್ಡಿನ್ಯಾಂಡ್ ಕಿಟಲ್ 1892ರಲ್ಲಿ ಪಾಂಡಿತ್ಯಪೂರ್ಣ ಕನ್ನಡ ನಿಘಂಟನ್ನು ರೂಪಿಸಿದರು. ಇದರಲ್ಲಿ ಒಟ್ಟು ಎಪ್ಪತ್ತು ಸಾವಿರ ಪದಗಳಿದ್ದು, ಗಾದೆ, ಒಗಟು, ಹಳೆಗನ್ನಡ ಕಾವ್ಯಗಳ ಉದಾಹರಣೆಗಳೂ ಕೂಡ ಹೇರಳವಾಗಿರುವುದು ವಿಶೇಷ. ಫರ್ಡಿನೆಂಡ್ ಕಿಟಲ್ ಅವರ ಈ ಅಪ್ರತಿಮ ಸಾಹಸಕ್ಕೆ ಜರ್ಮನಿಯ ಟ್ಯುಬಿಂಗನ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತು. ಇದು ನಿಘಂಟು ಪ್ರಯತ್ನಕ್ಕೆ ದೊರೆತ ಮೊದಲ ಡಾಕ್ಟರೇಟ್ ಎನ್ನಬಹುದು. ಕಿಟಲ್ ನಿಘಂಟಿನ ಮಹತ್ವವನ್ನು ಎಲ್ಲರೂ ಒಪ್ಪಿದರೂ ಕನ್ನಡದ ಅಗತ್ಯಕ್ಕೆ ಇನ್ನೂ ವಿದ್ವತ್ ಪೂರ್ಣವಾದ, ಸಮಗ್ರವಾದ ನಿಘಂಟಿನ ಅಗತ್ಯವಿತ್ತು.

ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾದಾಗಿನಿಂದಲೂ 'ಕನ್ನಡ–ಕನ್ನಡ ನಿಘಂಟ'ನ್ನು ರೂಪಿಸಬೇಕು ಎನ್ನುವ ಉದ್ದೇಶವನ್ನು ಹೊಂದಿತ್ತು. 1916ರಿಂದ ಈ ಕಾರ್ಯವು ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಬಂದಿತ್ತು. 1930ರ ಹೊತ್ತಿಗೆ ಪರಿಷತ್ತು ತನ್ನ ಪಂಡಿತ ವರ್ಗದ ಸಹಾಯದಿಂದ 'ಷಟ್ಪದಿ ಕಾವ್ಯಗಳ ಕನ್ನಡ–ಕನ್ನಡ ನಿಘಂಟು' 'ಪಂಪ ಭಾರತ ನಿಘಂಟು' ಮಾತ್ರವಲ್ಲದೆ ಹಲವು ಪ್ರಾಚೀನ ನಿಘಂಟುಗಳಿಂದ ಶಬ್ದಗಳನ್ನು ಸಂಗ್ರಹಿಸಿ 'ನಿಘಂಟುಗಳ ನಿಘಂಟು' ಹೀಗೆ ಹಲವು ನಿಘಂಟುಗಳನ್ನು ರೂಪಿಸಿತ್ತು. ಆದರೆ ಕನ್ನಡದ ಪದಗಳ ಅರ್ಥವನ್ನು ವಿವರಿಸುವ ಒಂದು ಸಮಗ್ರ ನಿಘಂಟಿನ ಕೊರತೆ ಕಾಡುತ್ತಲೇ ಇತ್ತು.

ಸಮಗ್ರ ಕನ್ನಡ ನಿಘಂಟು ರೂಪಿಸುವ ಕೆಲಸಕ್ಕೆ ಪ್ರೇರಣೆ ಸಿಕ್ಕಿದ್ದು 1941ರ ಡಿಸಂಬರ್‌ನಲ್ಲಿ. ಆಗ ಹೈದರಾಬಾದಿನಲ್ಲಿ ಸಮಾವೇಶವಾಗಿದ್ದ ಸಕಲಸದಸ್ಯರ ಸಭೆಯಲ್ಲಿ ನಿಘಂಟಿನ ಅಗತ್ಯದ ಬಗ್ಗೆ ಒಮ್ಮತದ ತೀರ್ಮಾನವಾಗಿ ಈ ಕುರಿತು ಪ್ರಯತ್ನ ಪಡುವಂತೆ ಕಾರ್ಯಕಾರಿ ಸಮಿತಿಯನ್ನು ವಿನಂತಿಸಲಾಯಿತು. ಪ್ರಾಥಮಿಕ ಸಿದ್ಧತೆಗಳಾದ ನಂತರ 1944ರ ಜನವರಿ 22ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದಲ್ಲಿ ಕನ್ನಡ ನಿಘಂಟಿನ ಕೆಲಸಗಳನ್ನು ಆರಂಭಿಸಲಾಯಿತು. ಶಬ್ದಸಂಗ್ರಹಣೆ ಮತ್ತು ಪರಿಶೋಧನೆ ಕೆಲಸಗಳು ನಿರಂತರವಾಗಿ ನಡೆದವು. ನಿಘಂಟಿನ ರೂಪರೇಷೆಗಳು ಖಚಿತಗೊಂಡಿದ್ದು 1955ರ ಕೊನೆಯಲ್ಲಿ. ಪ್ರೊ. ಎ. ಆರ್. ಕೃಷ್ಣ ಶಾಸ್ತ್ರಿಗಳು 1968ರವರೆಗೆ ಪ್ರಧಾನ ಸಂಪಾದಕರಾದರೆ ಪ್ರೊ. ಜಿ. ವೆಂಕಟಸುಬ್ಬಯ್ಯನವರು ನಂತರ ನಿಘಂಟಿನ ಮುಕ್ತಾಯದವರೆಗೂ ಪ್ರಧಾನ ಸಂಪಾದಕರಾಗಿದ್ದರು. ಇದನ್ನು ಹಲವಾರು ವಿದ್ವಾಂಸರು ಪರಿಶೀಲಿಸಿದರು. ಒಂದು ಕಡೆ ನಿಘಂಟು ಸಿದ್ಧವಾಗುತ್ತಿದ್ದರೂ ಈ ಬೃಹತ್ ನಿಘಂಟಿನ ಮುದ್ರಣ ಹೇಗೆ ಎಂಬ ಆತಂಕ ಇದ್ದೇ ಇತ್ತು. ಇದಕ್ಕೆ ಬೇಕಾದ ಜನಬಲವಾಗಲಿ, ಹಣಬಲವಾಗಲಿ ಆಗ ಪರಿಷತ್ತಿನಲ್ಲಿ ಇರಲಿಲ್ಲ. ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾದಾಗ ಇದಕ್ಕೆ ಬೇಕಾದ ಬೆಂಬಲ ದೊರಕಿಸಿಕೊಳ್ಳುವಲ್ಲಿ ಮಹತ್ವದ ಪ್ರಯತ್ನವನ್ನು ಮಾಡಿದರು. ಸ್ವತಃ ನಿಘಂಟು ತಜ್ಞರೇ ಆಗಿದ್ದ ಪ್ರೊ. ಜಿ. ವೆಂಕಟ ಸುಬ್ಬಯ್ಯನವರು ಅಧ್ಯಕ್ಷರಾದಾಗ ಅಂದಿನ ಹಣಕಾಸು ಸಚಿವರಾದ ರಾಮಕೃಷ್ಣ ಹೆಗಡಯವರ ಮನ ಒಲಿಸಿ ಸರ್ಕಾರದ ಬೆಂಬಲ ಪಡೆಯುವಲ್ಲಿ ಯಶಸ್ವಿಯಾದರು. ಆರಂಭದಲ್ಲಿ ನಿಘಂಟು ಸಂಚಿಕೆಯ ರೂಪದಲ್ಲಿ ಪ್ರಕಟವಾಯಿತು. ಮೊದಲ ಸಂಚಿಕೆ ಪ್ರಕಟವಾಗಿದ್ದು 1964ರ ಏಪ್ರಿಲ್ 26ರಂದು. ಹೀಗೆ ಹನ್ನೆರಡು ಸಂಚಿಕೆಗಳು ಮುಗಿದ ನಂತರ ಮೊದಲ ಸಂಪುಟ 1970ರಲ್ಲಿ ಸಿದ್ಧವಾಯಿತು. ಹೀಗೆ ಕನ್ನಡ ಬೃಹತ್ ನಿಘಂಟಿನ ಎಂಟು ಸಂಪುಟಗಳು ಸಿದ್ಧವಾದವು. ಇವುಗಳು ಹೊಂದಿದ ಪುಟಗಳು ಹೀಗಿದ್ದವು. ಮೊದಲ ಸಂಪುಟ (1412) ಎರಡನೆಯ ಸಂಪುಟ (1170) ಮೂರು (1015) ನಾಲ್ಕು (1020) ಐದು (988) ಆರು (1015) ಏಳು (1275) ಎಂಟನೆಯ ಸಂಪುಟ (1322) ಹೀಗೆ ಎಂಟು ಸಂಪುಟಗಳಲ್ಲಿ 9,217 ಪುಟಗಳ ಕನ್ನಡ ಬೃಹತ್ ನಿಘಂಟು ಸಿದ್ದವಾಯಿತು. ಯೋಜನೆ ಆರಂಭವಾದಾಗ ಸುಮಾರು ಐದು ಸಾವಿರ ಪುಟಗಳಾಗಬಹುದು ಎಂದು ನಿರೀಕ್ಷಿಸಿದ್ದು ಬಹು ಮಟ್ಟಿಗೆ ದ್ವಿಗಣ ಎನ್ನುವಷ್ಟರ ಮಟ್ಟಿಗೆ ಬೆಳೆಯಿತು. ಈ ನಿಘಂಟುಗಳು ಭಾಷಾಶಾಸ್ತ್ರದ ತತ್ವಗಳು, ಛಂದಸ್ಸಿನ ನಿಯಮಗಳು, ಕನ್ನಡ ಪರಂಪರೆ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿದ್ದವು. ಈ ರೀತಿಯಲ್ಲಿ ಶಾಸ್ತ್ರಬದ್ಧವಾದ ನಿಘಂಟು ಸಿದ್ಧವಾಗಿರುವುದು ಕನ್ನಡದಲ್ಲಿ ಮಾತ್ರವಲ್ಲ ಭಾರತೀಯ ಭಾಷೆಗಳಲ್ಲಿಯೇ ಮೊದಲು ಎನ್ನುವ ಹೆಗ್ಗಳಿಕೆಗೆ ಇದು ಪಾತ್ರವಾಯಿತು.

ಎಂಟು ಸಂಪುಟಗಳನ್ನು ಕನ್ನಡಿಗರು ಸ್ವಾಗತಿಸಿದರು. ಆದರೆ ಇದು ವಿದ್ವಾಂಸರಿಗೆ ನಿಲುಕಬಲ್ಲದ್ದು, ಜನ ಸಾಮಾನ್ಯರಿಗೂ ದೊರಕುವಂತಹ ನಿಘಂಟು ಬೇಕು ಎನ್ನುವ ಮಾತು ಇದು ರೂಪುಗೊಂಡಾಗಲೇ ಕೇಳಿ ಬಂದಿತು. ಹೀಗಾಗಿ ಮೂಲ ನಿಘಂಟಿನ ಎಲ್ಲಾ ಮಹತ್ವದ ಸಾಧ್ಯತೆಗಳನ್ನೂ ಒಳಗೊಂಡಂತೆ ಈ ಸಂಕ್ಷಿಪ್ತ ಕನ್ನಡ ನಿಘಂಟು ರೂಪುಗೊಂಡಿದೆ. 1978ರಲ್ಲಿ ಇದರ ಮೊದಲ ಆವೃತ್ತಿ 1975ರಲ್ಲಿ ಪ್ರಕಟವಾದಾಗ ಐವತ್ತು ಸಾವಿರ ಪ್ರತಿಗಳು ಬಿಡುಗಡೆಯಾದ ಒಂದೇ ತಿಂಗಳಿನಲ್ಲಿ ಮಾರಾಟವಾದವು. 1977ರಲ್ಲಿ ಒಂದು ಲಕ್ಷ ಪ್ರತಿಗಳು ಪ್ರಕಟವಾದಾಗಲೂ ಇಂತಹದೇ ಬೇಡಿಕೆ ಮುಂದುವರೆಯಿತು. 2001ರಲ್ಲಿ ಇದನ್ನು ಮರು ಮುದ್ರಿಸಲು ಯೋಚಿಸಿದಾಗ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎನ್. ಬಸವಾರಾಧ್ಯರು ಪರಿಷ್ಕರಿಸಲು ನಿರ್ಧರಿಸಿದರು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಸಂಕ್ಷಿಪ್ತ ನಿಘಂಟು ಅಚ್ಚಾದ ಕಾಲಕ್ಕೆ ಕನ್ನಡ ನಿಘಂಟಿನ ಎಲ್ಲಾ ಸಂಪುಟಗಳೂ ಅಚ್ಚಾಗಿರಲಿಲ್ಲ. ಸಂಕ್ಷಿಪ್ತ ನಿಘಂಟು ಪ್ರಕಟವಾಗುವ ಕಾಲಕ್ಕೆ ಅಚ್ಚಾದ ಸಂಪುಟಗಳನ್ನು ಆಧಾರವಾಗಿರಿಸಿ ಕೊಂಡು ಉಳಿದವುಗಳನ್ನು ಹಸ್ತಪ್ರತಿಗಳಿಂದ ಆಯ್ಕೆ ಮಾಡಲಾಗಿತ್ತು. ಈ ಹಸ್ತಪ್ರತಿಗಳಲ್ಲಿದ್ದ ಎಷ್ಟೋ ಪದಗಳ ಕುರಿತು ಚರ್ಚೆ ಅಂತಿಮವಾಗಿರಲಿಲ್ಲ. ಚರ್ಚೆಗಳು ಪೂರ್ಣವಾಗಿರಲಿಲ್ಲ. ಹೀಗಾಗಿ ಕನ್ನಡ ನಿಘಂಟಿಗೂ ಮತ್ತು ಸಂಕ್ಷಿಪ್ತ ನಿಘಂಟಿಗೂ ಅನೇಕ ವ್ಯತ್ಯಾಸಗಳು ಕಂಡು ಬಂದವು. ಹೀಗಾಗಿ ಪರಿಷ್ಕರಣ ಅನಿವಾರ್ಯವಾಯಿತು. ಈ ಪರಿಷ್ಕರಣಕ್ಕೆ ಎನ್. ಬಸವಾರಾಧ್ಯರು ಸಂಪಾದಕ ಮಂಡಳಿಯನ್ನು ರಚಿಸಿದರು. ಈ ಸಂಪಾದಕ ವರ್ಗದವರು ನಿಘಂಟು, ಸಂಕ್ಷಿಪ್ತ ನಿಘಂಟುವಿನ ಆವೃತ್ತಿಗಳ ಆಧಾರದ ಮೇಲೆ ಸಿದ್ಧಪಡಿಸಿದ ಕರಡನ್ನು ಸಂಪಾದಕ ಮಂಡಳಿ ಪರಿಶೀಲಿಸಿ, ಚರ್ಚಿಸಿ ಸೂಕ್ತ ತಿದ್ದುಪಡಿಯೊಂದಿಗೆ ಪರಿಷ್ಕರಣ ಕಾರ್ಯವನ್ನು ಮುಗಿಸಿದರು. ಮೊದಲ ಆವೃತ್ತಿಯಲ್ಲಿ 964 ಪುಟಗಳಿದ್ದಿದ್ದು ಪರಿಷ್ಕರಣದ ನಂತರ 1450 ಪುಟಗಳಾದವು. ಕನ್ನಡ ನಿಘಂಟು ಪರಿಷ್ಕರಣ, ಇಂಗ್ಲಿಷ್ ಲಿಪ್ಯಂತರ ಭಾಷಾಂತರ ಪದಕೋಶ, ಸಂಕ್ಷಿಪ್ತ ನಿಘಂಟು ಹಾಗೂ ರತ್ನಕೋಶದ ಪರಿಷ್ಕರಣ ಮುದ್ರಣಕ್ಕೆ ಆಗಿನ ರಾಜ್ಯ ಸರ್ಕಾರವು ಧನ ಸಹಾಯ ನೀಡಿದ್ದರಿಂದ ಕಡಿಮೆ ಬೆಲೆಗೆ ಇದನ್ನು ನೀಡುವುದು ಸಾಧ್ಯವಾಯಿತು.

ಸಂಕ್ಷಿಪ್ತ ಕನ್ನಡ ನಿಘಂಟು ಪರಿಷ್ಕರಣಗೊಂಡು ಇಪ್ಪತ್ತು ವರ್ಷಗಳೇ ಕಳೆದಿವೆ. ಈ ಅವಧಿಯಲ್ಲಿ ಕನ್ನಡ ಭಾಷೆಯ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ, ಅನೇಕ ಹೊಸ ಪದಗಳು ಸೇರಿ ಕೊಂಡಿವೆ, ಇರುವ ಪದಗಳು ಅರ್ಥ ವ್ಯತ್ಯಯ ಪಡೆದಿವೆ ಈ ಎಲ್ಲಾ ಹಿನ್ನೆಲೆಯಲ್ಲಿ ಇನ್ನೊಂದು ಪರಿಷ್ಕರಣದ ಪ್ರಸ್ತಾಪವನ್ನು ನಾವು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಮುಂದಿನ ಮುದ್ರಣದ ವೇಳೆಗೆ ಮರು ಪರಿಷ್ಕರಣಗೊಂಡ ನಿಘಂಟು ತಮ್ಮ ಕೈ ಸೇರಲಿದೆ ಎನ್ನುವ ವಿಶ್ವಾಸ ನಮ್ಮದು.

ಮುಂದುವರಿದು ಸಂಕ್ಷಿಪ್ತ ಕನ್ನಡ ನಿಘಂಟು ಮತ್ತು ಕನ್ನಡ ರತ್ನಕೋಶ ಮರುಮುದ್ರಣಗೊಂಡಿರುತ್ತದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಇಂಗ್ಲಿಷ್ ಭಾಷೆಯ ಬಳಕೆ ಹೆಚ್ಚಾಗುತ್ತಿರುವಾದ ದ್ವಿಭಾಷಾ ನಿಘಂಟಿನ ಅಗತ್ಯ ಹೆಚ್ಚಾಯಿತು. ಶಾಲಾ–ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಬೋಧಕರು, ಬರಹಗಾರರು, ಅನುವಾದ ಕ್ಷೇತ್ರದಲ್ಲಿ ತೊಡಗಿರುವವರು ಎಲ್ಲರನ್ನೂ ಗಮನದಲ್ಲಿಟ್ಟು ಕೊಂಡು ಕನ್ನಡ ಸಾಹಿತ್ಯ ಪರಿಷತ್ತು ದ್ವಿಭಾಷಾ ನಿಘಂಟನ್ನು ರೂಪಿಸಿದೆ. ಇದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟೇ ಪ್ರಧಾನ ಆಧಾರ. ಇದರೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ನಿಘಂಟಿನ ಎಂಟು ಸಂಪುಟಗಳು. ಲಭ್ಯವಿರುವ ಪ್ರಧಾನ ನಿಘಂಟುಗಳು, ವಿ.ಎಸ್.ಆಪ್ಟೆ, ಮೋನಿಯರ್–ಮೋನಿಯರ್–ವಿಲಿಯಮ್ಸ್ ಸಂಪಾದಿಸಿರುವ ಸಂಸ್ಕೃತ ಪದಕೋಶಗಳು, ಆಕ್ಸಫರ್ಡ್ ಇಂಗ್ಲಿಷ್ ನಿಘಂಟು(ಹತ್ತನೆಯ ಆವೃತ್ತಿ)ಯ ನೆರವನ್ನು ಪಡೆಯಲಾಗಿದೆ.

ಈ ನಿಘಂಟಿನಲ್ಲಿ ಅಕಾರಾದಿಯಾಗಿ ನಲವತ್ತು ಸಾವಿರ ಪದಗಳಿದ್ದು ಮೊದಲಿಗೆ ಕನ್ನಡ ಪದ, ಅದು ನಾಮ ಪದವೋ, ಕ್ರಿಯಾಪದವೋ ಎನ್ನುವುದರ ಸೂಚನೆ, ಇಂಗ್ಲಿಷ್ ಲಿಪ್ಯಂತರ, ಕನ್ನಡದಲ್ಲಿ ಪದದ ಅರ್ಥ, ಸಮನಾರ್ಥಕ ಪದಗಳು, ಅವುಗಳ ಆಂಗ್ಲಪದ ಅದರ ಸ್ವರೂಪ ಅವುಗಳ ಆಂಗ್ಲ ಅರ್ಥ ಈ ಮಾದರಿಯನ್ನು ಅನುಸರಿಸಲಾಗಿದೆ. ಒಂದೊಂದು ನಾಮಪದಕ್ಕೂ ಇರುವ ಹಲವಾರು ಅರ್ಥಗಳು, ಛಾಯಾ ಅರ್ಥಗಳನ್ನು ಸಂಖ್ಯಾನುಕ್ರಮದಲ್ಲಿ ನೀಡಲಾಗಿದೆ. ಹೀಗಾಗಿ ಒಂದೊಂದು ಪದವೂ ಹಲವಾರು ಸಾಧ್ಯತೆಗಳನ್ನು ನೀಡುತ್ತದೆ. ಎಷ್ಟೋ ಸಲ ಕನ್ನಡಕ್ಕೆ ಸಮಾನಂತರ ಇಂಗ್ಲಿಷ್ ಪದಗಳು ದೊರಕದಾಗ ಹತ್ತಿರದ ಪದಗಳನ್ನು ಸೂಚಿಸಲಾಗಿದೆ. ಅಚ್ಚಗನ್ನಡ ಪದದ ಜೊತೆಗೆ ಬೇರೆ ಬೇರೆ ಭಾಷೆಗಳಿಂದ ಆಮದಾದ ಪದಗಳನ್ನು ಇಟಾಲಿಕ್‌ನಲ್ಲಿ ಸೂಚಿಸಿದೆ. ಕನ್ನಡದಲ್ಲಿ ದೇಸಿ ಮತ್ತು ಶಿಷ್ಟ ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ನುಡಿಗಟ್ಟುಗಳಿವೆ. ಅದಕ್ಕೆ ಇಂಗ್ಲಿಷ್ ಸಮಾನಂತರ ಪದಗಳು ದೊರಕುವುದಿಲ್ಲ. ಹೀಗಾಗಿ ಸಮೀಪದ ಅರ್ಥಗಳನ್ನು ನೀಡಲಾಗಿದೆ.

ಈ ಪದಕೋಶ ರೂಪುಗೊಂಡಿದ್ದು 2003ರಲ್ಲಿ ಅಲ್ಲಿಂದ ಮುಂದೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಾಕಷ್ಟು ಬೆಳವಣಿಗೆ ಆಗಿದೆ. ಈ ನಿಘಂಟು ರೂಪುಗೊಳ್ಳುವಾಗ ಶಬ್ದಾರ್ಥ ಕೌಸ್ತುಭದಂತಹ ಅತಿ ಮುಖ್ಯ ನಿಘಂಟನ್ನು ಗಮನಿಸದೇ ಹೋಗಿರುವುದು ಕೊರತೆಯಾಗಿದೆ. ಈ ಹಿನ್ನೆಲೆಯಲ್ಲಿ ನಿಘಂಟು ಪರಿಷ್ಕರಣಕ್ಕೆ ಪ್ರಸ್ತಾವನೆಯನ್ನ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಶೀಘ್ರವೇ ಅನುಮೋದನೆ ದೊರಕುವ ನಿರೀಕ್ಷೆ ಇದೆ. ಮುಂದಿನ ಆವೃತ್ತಿಯಲ್ಲಿ ಪರಿಷ್ಕೃತ ನಿಘಂಟು ನಿಮಗೆ ದೊರಕಲಿದೆ ಎನ್ನುವ ವಿಶ್ವಾಸ ನಮ್ಮದು.

ಸದರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ತಜ್ಞರನ್ನೊಳಗೊಂಡ ಈ ಕೆಳಕಂಡ ನಿಘಂಟು ಸಮಿತಿಯನ್ನು ರಚಿಸಲಾಗಿದೆ.

**<u>ನಿಘಂಟು ಸಮಿತಿ</u>**

ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ, ನಿಘಂಟು ಸಮಿತಿ ಇರುತ್ತದೆ.

೧) ಅಧ್ಯಕ್ಷರು
ನಾಡೋಜ ಡಾ. ಮಹೇಶ ಜೋಶಿ
೨) ಪ್ರಧಾನ ಸಂಪಾದಕರು
೩) ಪರಿಶೀಲನಾಕಾರರು
೪) ಉಪಸಂಪಾದಕರು
೫) ಸಹಾಯಕ ಸಂಪಾದಕರು
೬) ಡಿ.ಟಿ.ಪಿ ಮಾಡುವವರು

**ಈ ಪ್ರಕಟಣೆಗಳ ಪೈಕಿ ಪರಿಷತ್ತನ್ನು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿಸಿದ್ದೆಂದರೆ, ಅದು ಹೊರತಂದಿರುವ ಬಹೂಪಯೋಗಿ ನಿಘಂಟುಗಳು.** ಪರಿಷತ್ತಿನ ಸ್ಥಾಪನೆಯ ಮೂಲ ಉದ್ದೇಶಗಳಲ್ಲಿ ಪಂಡಿತಮಾನ್ಯವಾದ, ಪರಾಮರ್ಶನ ಮೌಲ್ಯವುಳ್ಳ ಕನ್ನಡ–ಕನ್ನಡ ನಿಘಂಟಿನ ಪ್ರಕಟಣೆ ಮಹತ್ತ್ವವಾದುದು. ೪೫ ವರ್ಷಗಳ ಕಾಲ ಸುಮಾರು ನೂರು ಘನ ವಿದ್ವಾಂಸರ ಅಹರ್ನಿಶಿ ಬೌದ್ಧಿಕ ಶ್ರಮದ ಫಲವಾಗಿ ಹೊರಬಂದ, ಒಟ್ಟು ಎಂಟು ಸಂಪುಟಗಳ ೯೨೦೦ ಪುಟಗಳ ಬೃಹತ್ ಸ್ವರೂಪದ **ಕನ್ನಡ–ಕನ್ನಡ ನಿಘಂಟು** ಪ್ರಕಟವಾಯಿತು. ಈ ಸ್ವರೂಪದ ನಿಘಂಟು ಭಾರತೀಯ ಭಾಷೆಗಳ ಪೈಕಿ ಅತ್ಯಂತ ಅಮೋಘವಾದುದು, ಅಪರೂಪವಾದುದು. ಇದು ಭಾರತೀಯ ಭಾಷೆಗಳ ನಿಘಂಟುಗಳಲ್ಲೇ 'ಏಕಂ ಏವಾ ಅದ್ವಿತೀಯವಾದುದು. ಪರಿಷತ್ತಿನ ಮತ್ತೊಂದು ಮಹತ್ವದ ಪ್ರಕಟಣೆ ಸುಮಾರು ೧೪೫೦ ಪುಟಗಳಷ್ಟಿರುವ **ಸಂಕ್ಷಿಪ್ತ ಕನ್ನಡ ನಿಘಂಟು** ಹಾಗೂ ೧೬೫೪ ಪುಟಗಳಷ್ಟಿರುವ **ಸಂಕ್ಷಿಪ್ತ ಕನ್ನಡ–ಇಂಗ್ಲಿಷ್ ನಿಘಂಟು**. ವಿದ್ಯಾರ್ಥಿಗಳಿಗೆ ನೆರವಾಗುವಂತಹ ಸಣ್ಣ ಆಕಾರದ **ಕನ್ನಡ ರತ್ನಕೋಶ** ಎಂಬ ನಿಘಂಟು ಪರಿಷತ್ತಿನ ಖ್ಯಾತಿಯು ಮನೆಮನೆಗೂ ತಲುಪಿತು. ಇದುವರೆಗೆ ಇದರ ೧೦ ಲಕ್ಷ ಪ್ರತಿಗಳು ಮಾರಾಟವಾಗಿವೆ. ಪ್ರಕಟಣಾ ಕ್ಷೇತ್ರದಲ್ಲಿ ಪರಿಷತ್ತಿನ ವಿಕ್ರಮವಾಗಿದೆ.

**ಪುಸ್ತಕ ಪ್ರಕಟಣಾ ಸಮಿತಿ ರಚನೆ :**

**ನೂತನ ನಿಬಂಧನೆಗಳನ್ವಯ ರಚಿಸಿರುವ ಗ್ರಂಥ ಪ್ರಕಟಣಾ ಸಮಿತಿ ಸದಸ್ಯರ ಪಟ್ಟಿ (೨೦೨೧ – ೨೦೨೬)**

**ಪ್ರಕಟಣಾ ಸಮಿತಿ ಅಧ್ಯಕ್ಷರು :**

| | | | |
|---|---|---|---|
| ೧. | **ಕೇಂದ್ರ ಪರಿಷತ್ತಿನ ಅಧ್ಯಕ್ಷರು** | – | **ನಾಡೋಜ ಡಾ. ಮಹೇಶ ಜೋಶಿ** |

**ಪ್ರಕಟಣಾ ಸಮಿತಿ ಸದಸ್ಯರು :**

(ಅ)

| | | | |
|---|---|---|---|
| ೨. | **ಕೇಂದ್ರ ಪರಿಷತ್ತಿನ ಗೌರವ ಕಾರ್ಯದರ್ಶಿ** | – | **ಶ್ರೀ ನೇ.ಭ. ರಾಮಲಿಂಗಶೆಟ್ಟಿ**<br>**ಡಾ. ಪದ್ಮಿನಿ ನಾಗರಾಜು** |
| ೩. | **ಕೇಂದ್ರ ಪರಿಷತ್ತಿನ ಗೌರವ ಕೋಶಾಧ್ಯಕ್ಷರು** | – | **ಶ್ರೀ ಬಿ.ಎಂ. ಪಟೇಲ್‌ಪಾಂಡು** |
| ೪. | **ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರು** | – | **ಶ್ರೀ ನೀಲಾವರ ಸುರೇಂದ್ರ ಅಡಿಗ**<br>ಅಧ್ಯಕ್ಷರು, ಉಡುಪಿ ಜಿಲ್ಲಾ ಕಸಾಪ<br>**ಶ್ರೀ ಕೋಡಿ ರಂಗಪ್ಪ**<br>ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲಾ ಕಸಾಪ |
| ೫. | **ಇಬ್ಬರು ಸಾಹಿತಿಗಳು/ ವಿಷಯತಜ್ಞರು** | – | **ಡಾ. ಪ್ರಧಾನ ಗುರುದತ್ತ,** ಹಿರಿಯ ವಿದ್ವಾಂಸರು<br>**ಶ್ರೀಮತಿ ಕಲಾವತಿ ಜಿ.ಕೆ. ಹೊಳ್ಳ,** ಲೇಖಕರು<br>**ಶ್ರೀ ಯು.ಎನ್. ಕುಂಟೋಜಿ,** ಲೇಖಕರು |

(ಆ) **ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ**

(ಇ) **ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು**

(ಈ) **ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ**

(ಉ) **ಸಾರ್ವಜನಿಕ ಮುಖ್ಯ ಗ್ರಂಥಾಲಯದ ನಿರ್ದೇಶಕರು ಅಥವಾ ಅವರ ಪ್ರತಿನಿಧಿ**

(ಊ) **ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷರು**

(ಋ) **ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷರು**

(ಎ) **ಸಾಹಿತ್ಯ ಪ್ರಕಾಶನದ ಮಾಲೀಕರು**

**ಇತ್ತೀಚಿನ ಪುಸ್ತಕಗಳ ವಿವರ:**

**ಪುಸ್ತಕ ಮಾರಾಟ ವಿಭಾಗ:**

ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಅವಧಿಯಲ್ಲಿ (೧೯೬೯-೧೯೭೮) ಪುಸ್ತಕ ಮಾರಾಟ ವಿಭಾಗವು ಪ್ರಾರಂಭವಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮುದ್ರಿತವಾಗಿ ಪ್ರಕಟಣೆಗೊಂಡ ಹಾಗೂ ಮರುಮುದ್ರಣಗೊಂಡ ಪುಸ್ತಕಗಳನ್ನು ಮಾರಾಟ ವಿಭಾಗದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ.

ಹಳಗನ್ನಡ ಕಾವ್ಯಗಳ ಗದ್ಯಾನುವಾದಗಳು, ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು, ಸಂಕ್ಷಿಪ್ತ ಇಂಗ್ಲಿಷ್ ನಿಘಂಟು ಹಾಗೂ ಬೃಹತ್ ಕನ್ನಡ ಕನ್ನಡ ನಿಘಂಟು (೮ ಸಂಪುಟಗಳು), ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಸಮ್ಮೇಳನಾಧ್ಯಕ್ಷರುಗಳ ಭಾಷಣಗಳು, ಮಹಿಳಾ ಸಾಹಿತ್ಯ ಸಂಪುಟಗಳು, ದಲಿತ ಸಾಹಿತ್ಯ ಸಂಪುಟಗಳು, ಶತಮಾನೋತ್ಸವ ಮಾಲಿಕೆ, ಜೀವನ ಚರಿತ್ರೆಗಳು, ಕ.ಸಾ.ಪ ಪರೀಕ್ಷೆ ಪುಸ್ತಕಗಳು ಮುಂತಾದ ಮೌಲ್ಯಯುತ ಪುಸ್ತಕಗಳು ಮುದ್ರಣಗೊಂಡಿವೆ. ಅಲ್ಲದೇ ಸುಮಾರು ೧೮೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದು, ಗ್ರಂಥ ಪ್ರಕಟಣೆಯ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವಿಶಿಷ್ಟ ಸ್ಥಾನ ಪಡೆದಿದೆ. ಇವುಗಳಲ್ಲಿ ಬಹುತೇಕ ಕೃತಿಗಳು ಮಾರಾಟಕ್ಕೆ ಲಭ್ಯವಿರುತ್ತವೆ. ೧೯೭೭ರಲ್ಲಿ ಪ್ರಥಮ ಮುದ್ರಣಗೊಂಡ ಕನ್ನಡ ರತ್ನಕೋಶ ಇದುವರೆಗೂ ೧೪ ಬಾರಿ ಮರುಮುದ್ರಣಗೊಂಡು ೧೦ಲಕ್ಷ ಪ್ರತಿಗಳು ಮಾರಾಟವಾಗಿದ್ದು ಆಸಕ್ತರ ಕೈಸೇರಿವೆ.

ಸಂಕ್ಷಿಪ್ತ ಕನ್ನಡ ನಿಘಂಟು ೧೪ನೇ ಬಾರಿ ಮರುಮುದ್ರಣಗೊಂಡು ಸುಮಾರು ಮೂರು ಲಕ್ಷ ಪ್ರತಿಗಳು ಮಾರಾಟವಾಗಿದ್ದು, ಸಾರ್ವಜನಿಕರ ಕೈಗೆ ಎಟುಕುವ ದರದಲ್ಲಿ ನೀಡುತ್ತಾ ಬಂದಿದೆ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ನೀಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ.

ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನವೆಂಬರ್‌ನಲ್ಲಿ **"ವಿಶೇಷ ರಿಯಾಯಿತಿ ಪುಸ್ತಕ ಮಾರಾಟ ಮೇಳ"**ವನ್ನು ಏರ್ಪಡಿಸುತ್ತಿದ್ದು, ನಾಡಿನ ಮೂಲೆ ಮೂಲೆಗಳಿಂದ ಸಾಹಿತ್ಯಾಸಕ್ತರು ಪರಿಷತ್ತಿಗೆ ಬಂದು ಪುಸ್ತಕ ಖರೀದಿಸುತ್ತಿದ್ದಾರೆ. ಅನೇಕರು ಪರಿಷತ್ತಿಗೆ ಮನಿಯಾರ್ಡರ್ ಮೂಲಕ ಹಣವನ್ನು ಕಳುಹಿಸಿ ಪುಸ್ತಕಗಳನ್ನು ಖರೀದಿಸುತ್ತಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ವಾರ್ಷಿಕ ಸುಮಾರು ೫೦.೦೦ ಲಕ್ಷ ರೂಪಾಯಿಗಳ (ರೂ. ಐವತ್ತು ಲಕ್ಷಗಳು) ವಹಿವಾಟು ಪುಸ್ತಕ ಮಾರಾಟದಿಂದ ನಡೆಸುತ್ತಿದ್ದು, ವರ್ಷಪೂರ್ತಿ ರಿಯಾಯಿತಿ ಪುಸ್ತಕ ಮಾರಾಟವಿರುತ್ತದೆ. ಪುಸ್ತಕ ಮಾರಾಟದಿಂದ ಸಂಗ್ರಹವಾದ ಹಣವನ್ನು ಕಸಾಪ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಕಛೇರಿ ಆದೇಶ ಸಂಖ್ಯೆ: ಕಸಾಪ/ಮಾ.ವಿ./೨೦೨೪-೨೫ ದಿನಾಂಕ: ೨೬-೦೬-೨೦೨೪ರನ್ವಯ ಸರ್ಕಾರದ ರಜ ದಿನಗಳನ್ನು ಹೊರತುಪಡಿಸಿ, ಎರಡನೇ ಶನಿವಾರ ಸೇರಿದಂತೆ ಪ್ರತಿದಿನ ಬೆಳಿಗ್ಗೆ ೧೦.೦೦ ರಿಂದ ೫.೩೦ರವರೆಗೆ ಪುಸ್ತಕ ಮಾರಾಟ ಮಳಿಗೆ ತೆರೆದಿರುತ್ತದೆ.

ಕೆಲವು ಪುಸ್ತಕಗಳಿಗೆ ರಯಾಯತಿ ದರದಲ್ಲಿ ಮಾರಾಟ ಮಾಡಲಾಗುವುದು.

ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿ ಆದೇಶ ಸಂಖ್ಯೆ: ಕ್ರಮ.ಸಂ.ಕಸಾಪ/ಮಾ.ವಿ./೨೦೨೨೧-೨೨, ದಿನಾಂಕ:೦೬-೦೧-೨೦೨೨ ರನ್ವಯ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಆದೇಶಿಸಿದೆ.

| ಕ್ರ.ಸಂ. | ಪುಸ್ತಕಗಳ ವಿವರ | ಸಾರ್ವಜನಿಕರಿಗೆ | ಆಜೀವ ಸದಸ್ಯರಿಗೆ & ಶಾಲಾ ಕಾಲೇಜುಗಳಿಗೆ | ಮಾರಾಟಗಾರರಿಗೆ |
|---|---|---|---|---|
| ೧. | ರತ್ನಕೋಶ & ಸಂಕ್ಷಿಪ್ತ ನಿಘಂಟು<br>ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟು | ಶೇ. ೧೦ | ಶೇ. ೧೦ | ಶೇ. ೧೫ |
| ೨. | ಬೃಹತ್ ಕನ್ನಡ ಕನ್ನಡ ನಿಘಂಟು<br>(೮ ಸಂಪುಟಗಳು ರೂ, ೨೮೦೦/-) | ಶೇ. ೨೦ | ಶೇ. ೨೦ | ಶೇ. ೨೫ |
| ೩. | ಗದ್ಯಾನುವಾದ, ಪರೀಕ್ಷೆ ಪುಸ್ತಕ, | ಶೇ. ೨೦ | ಶೇ. ೩೦ | ಶೇ. ೪೦ |

| | | | | |
|---|---|---|---|---|
| | ಶತಮಾನೋತ್ಸವ ಮಾಲಿಕೆ ಪುಸ್ತಕ, ಆಧುನಿಕ ಕ.ಸಾ. ಚರಿತ್ರೆ ಸಂಪುಟಗಳು, ಮಹಿಳಾ ಸಾಹಿತ್ಯ ಸಂಪುಟ, ಜೀವನ ಚರಿತ್ರೆ | | | |
| ೪. | ಅ.ಭಾ.ಕ ಸಾಹಿತ್ಯ ಸಮ್ಮೇಳನದ (ಬೀದರ್) ಪುಸ್ತಕ, ಜಿಲ್ಲಾ ಸಾಹಿತ್ಯ ಸಮ್ಮೇಳನದ ಪುಸ್ತಕ, ಪಿಎಚ್‌ಡಿ ಪುಸ್ತಕ, ದಲಿತ ಸಾ. ಸಂಪುಟ | **ಶೇ. ೫೦** | **ಶೇ. ೫೦** | **ಶೇ. ೫೦** |
| ೫. | ಸಮ್ಮೇಳನದ ಸ್ಮರಣ ಸಂಚಿಕೆಗಳು | **ಶೇ. ೭೫** | **ಶೇ. ೭೫** | **ಶೇ. ೭೫** |
| ೬. | ಹೊರಗಡೆ ಮಾರಾಟದ ಸಂದರ್ಭದಲ್ಲಿ ರತ್ನಕೋಶ ಮತ್ತು ನಿಘಂಟುಗಳು ಹೊರತು ಪಡಿಸಿ ಉಳಿದ ಪುಸ್ತಕಗಳಿಗೆ | **ಶೇ. ೩೦** | **ಶೇ. ೩೦** | **ಶೇ. ೩೦** |

## ೮. ದಾಸ್ತಾನು (ಉಗ್ರಾಣ) ವಿಭಾಗ:

ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯಲ್ಲಿ ಪ್ರತ್ಯೇಕವಾಗಿ ದಾಸ್ತಾನು (ಉಗ್ರಾಣ) ವಿಭಾಗವನ್ನು ತೆರೆಯಲಾಗಿದೆ. ಈ ವಿಭಾಗದಲ್ಲಿ ಪರಿಷತ್ತಿನಲ್ಲಿ ಪ್ರಕಟಣೆಗೊಂಡ ಪುಸ್ತಕಗಳನ್ನು ಅಚ್ಚುಕೂಟದಿಂದ ಉಗ್ರಾಣದ ದಾಸ್ತಾನಿಗೆ ಪಡೆಯಲಾಗುತ್ತದೆ. ನಂತರ, ಉಗ್ರಾಣದಿಂದ ಪುಸ್ತಕ ಮಾರಾಟ ವಿಭಾಗಕ್ಕೆ ಸರಬರಾಜು ಮಾಡಲಾಗುತ್ತದೆ. ಕೇಂದ್ರ ಪರಿಷತ್ತಿನ ಪೀಠೋಪಕರಣ ದಾಸ್ತಾನುಗಳ ನಿರ್ವಹಣೆ, ಲೇಖನ ಸಾಮಗ್ರಿ, ಮುದ್ರಣ ಸಾಮಗ್ರಿ, ಮುದ್ರಣ ಕಾಗದ, ಕಛೇರಿಯ ದಿನ ನಿತ್ಯ ಬಳಕೆಯ ಲೇಖನ ಸಾಮಗ್ರಿ ಇವುಗಳನ್ನು ನಿಯಮಾನುಸಾರ ಖರೀದಿಸಿ, ವಿತರಣೆ ಮಾಡಿ ದಾಖಲಾತಿಯನ್ನು ಮಾಡಲಾಗುತ್ತಿದೆ. ಕೇಂದ್ರ ಪರಿಷತ್ತಿನ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ನಿರ್ವಹಣೆಯ ಜೊತೆಗೆ ಕಟ್ಟಡದ ಕಾಮಗಾರಿಗೆ ಸಂಬಂಧಿಸಿದಂತೆ ನಿಯಮಾನುಸಾರ ದರಪಟ್ಟಿ ಕರೆದು, ಕಾಮಗಾರಿ ಆದೇಶವನ್ನು ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. ಅಲ್ಲದೇ ಕೇಂದ್ರ ಪರಿಷತ್ತಿಗೆ ಸಂಬಂಧಿಸಿದ ವಿದ್ಯುತ್, ನೀರು ಮತ್ತು ದೂರವಾಣಿ ದುರಸ್ಥಿ ನಿರ್ವಹಿಸಲಾಗುತ್ತಿದೆ. ಗಣಕಯಂತ್ರ ವಿಭಾಗಕ್ಕೆ ಸಂಬಂಧಿಸಿದ ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳು, ಅದಕ್ಕೆ ಸಂಬಂಧಿಸಿದ ಸಾಮಗ್ರಿಗಳ ಖರೀದಿ ಮತ್ತು ದುರಸ್ಥಿ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ಕೇಂದ್ರ ಪರಿಷತ್ತಿನ ಸಾಮಾಜಿಕ ಜಾಲತಾಣ ಮತ್ತು ಅಂತರ್‌ಜಾಲ, ಸಿಸಿ ಟಿವಿ, ಯುಪಿಎಸ್, ಬ್ಯಾಟರಿ ಹಾಗೂ ಸರ್ವರ್ ರೂಂನ ಸಂಪೂರ್ಣ ನಿರ್ವಹಣೆ ದಾಸ್ತಾನು ವಿಭಾಗದಿಂದ ನಿರ್ವಹಿಸಲಾಗುತ್ತಿದೆ.

**ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯ ಹುದ್ದೆಗಳ ವಿವರ:**

೧) ಚುನಾಯಿತ ಅಧ್ಯಕ್ಷರು

**<u>ಪದಾಧಿಕಾರಿಗಳು</u>**

೨) ಗೌರವ ಕಾರ್ಯದರ್ಶಿ–೧

೩) ಗೌರವ ಕಾರ್ಯದರ್ಶಿ–೨

೪) ಗೌರವ ಕೋಶಾಧ್ಯಕ್ಷರು

ಸರ್ಕಾರಿ ಆದೇಶ ಸಂಖ್ಯೆ: ಸಂಕಾಇ ೨೭೧/ಕಸಧ ೯೪ ದಿನಾಂಕ: ೨೪–೦೫–೧೯೯೬ ರನ್ವಯ ದಿನಾಂಕ: ೦೧–೦೬–೧೯೯೬ರಿಂದ ಜಾರಿಗೆ ಬರುವಂತೆ ಅನುದಾನ ಸಂಹಿತೆಗೆ ಒಳಪಡಿಸಲಾಗಿದೆ. (ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:೨೬೬:ವೆಚ್ಚ–೫:೯೬ ದಿನಾಂಕ: ೦೭–೦೫–೧೯೯೬)

**ಕೇಂದ್ರ ಕಛೇರಿಯ ಹುದ್ದೆಗಳ ವಿವರ:**

**<u>ಪ್ರಧಾನ ಕಛೇರಿ</u>**

| | |
|---|---|
| ೧) ವ್ಯವಸ್ಥಾಪಕ (ಆಡಳಿತ) | ೧ |
| ೨) ಅಧೀಕ್ಷಕ (ಜಿಲ್ಲಾ ಘಟಕ ಯೋಜನೆ) | ೧ |
| ೩) ಲೆಕ್ಕ ಅಧೀಕ್ಷಕ | ೧ |
| ೪) ಗ್ರಂಥಪಾಲಕ (ಲೈಬ್ರರಿಯನ್) | ೧ |
| ೫) ಸಹಾಯಕ ಗ್ರಂಥಪಾಲಕ (ಲೈಬ್ರರಿಯನ್) | ೧ |
| ೬) ಪ್ರಥಮ ದರ್ಜೆ ಸಹಾಯಕ | ೧೧ |
| ೭) ಶೀಘ್ರ ಲಿಪಿಗಾರ | ೨ |
| ೮) ಗ್ರಂಥಾಲಯ ಸಹಾಯಕ | ೧ |
| ೯) ದ್ವಿತೀಯ ದರ್ಜೆ ಸಹಾಯಕ | ೨ |
| ೧೦) ಬೆರಳಚ್ಚುಗಾರ | ೨ |
| ೧೧) ಅಟೆಂಡರ್ | ೨ |
| ೧೨) 'ಡಿ' ದರ್ಜೆ ನೌಕರ | ೧೦ |

**<u>ಅಚ್ಚುಕೂಟ ವಿಭಾಗ</u>**

| | |
|---|---|
| ೧೩) ಮೇಲ್ವಿಚಾರಕ | ೧ |
| ೧೪) ಹಿರಿಯ ಕಂಪೊಸಿಟರ್ | ೩ |
| ೧೫) ಹಿರಿಯ ಯಂತ್ರಚಾಲಕ | ೨ |
| ೧೬) ಹಿರಿಯ ಕರಡು ತಿದ್ದುಗಾರ | ೧ |
| ೧೭) ಕಂಪೊಸಿಟರ್ | ೧ |
| ೧೮) ಯಂತ್ರಚಾಲಕ | ೧ |
| ೧೯) ಕಿರಿಯ ಕಂಪೊಸಿಟರ್ | ೧ |
| ೨೦) ಬೈಂಡರ್ | ೧ |
| ೨೧) ಹೆಲ್ಪರ್ | ೩ |

**<u>ಕನ್ನಡ–ಕನ್ನಡ–ನಿಘಂಟು ಕಛೇರಿ</u>**

| | |
|---|---|
| ೨೨) ಉಪ ಸಂಪಾದಕ | ೩ |
| ೨೩) ಸಹಾಯಕ ಸಂಪಾದಕ | ೧ |
| ೨೪) ಬೆರಳಚ್ಚುಗಾರ | ೨ |
| ೨೫) ಅಟೆಂಡರ್ | ೧ |
| ೨೬) 'ಡಿ' ದರ್ಜೆಯ ನೌಕರ | ೨ |

**<u>ಹೊಸದಾಗಿ ಒಪ್ಪಲಾದ ಹುದ್ದೆಗಳು</u>**

| | |
|---|---|
| ೨೭) ತಾಂತ್ರಿಕ ಮೇಲ್ವಿಚಾರಕ | ೧ |
| ೨೮) ಹಿರಿಯ ಕಂಪ್ಯೂಟರ್ ಆಪರೇಟರ್ | ೧ |

೨೯) ಕಿರಿಯ ಕಂಪ್ಯೂಟರ್ ಆಪರೇಟರ್ ೧
೩೦) ವಾಹನ ಚಾಲಕ ೧

**ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ**

**ಪ್ರಧಾನ ಕಛೇರಿ**

೧) ವ್ಯವಸ್ಥಾಪಕ (ಆಡಳಿತ)
೨) ಅಧೀಕ್ಷಕ (ಜಿಲ್ಲಾ ಘಟಕ ಯೋಜನೆ)
೩) ಲೆಕ್ಕ ಅಧೀಕ್ಷಕ
೪) ಗ್ರಂಥಪಾಲಕ (ಲೈಬ್ರರಿಯನ್)
೫) ಸಹಾಯಕ ಗ್ರಂಥಪಾಲಕ (ಲೈಬ್ರರಿಯನ್)
೬) ಪ್ರಥಮ ದರ್ಜೆ ಸಹಾಯಕ
೭) ಶೀಘ್ರ ಲಿಪಿಗಾರ
೮) ಗ್ರಂಥಾಲಯ ಸಹಾಯಕ
೯) ದ್ವಿತೀಯ ದರ್ಜೆ ಸಹಾಯಕ
೧೦) ಬೆರಳಚ್ಚುಗಾರ
೧೧) ಅಟೆಂಡರ್
೧೨) 'ಡಿ' ದರ್ಜೆ ನೌಕರ
೧೩) ಮೇಲ್ವಿಚಾರಕ
೧೪) ಹಿರಿಯ ಕಂಪೊಸಿಟರ್
೧೫) ಹಿರಿಯ ಯಂತ್ರಚಾಲಕ
೧೬) ಹಿರಿಯ ಕರಡು ತಿದ್ದುಗಾರ
೧೭) ಕಂಪೊಸಿಟರ್
೧೮) ಯಂತ್ರಚಾಲಕ
೧೯) ಕಿರಿಯ ಕಂಪೊಸಿಟರ್
೨೦) ಬೈಂಡರ್
೨೧) ಹೆಲ್ಪರ್
೨೨) ಉಪ ಸಂಪಾದಕ
೨೩) ಸಹಾಯಕ ಸಂಪಾದಕ
೨೪) ಬೆರಳಚ್ಚುಗಾರ
೨೫) ಅಟೆಂಡರ್
೨೬) 'ಡಿ' ದರ್ಜೆಯ ನೌಕರ
೨೭) ತಾಂತ್ರಿಕ ಮೇಲ್ವಿಚಾರಕ
೨೮) ಹಿರಿಯ ಕಂಪ್ಯೂಟರ್ ಆಪರೇಟರ್
೨೯) ಕಿರಿಯ ಕಂಪ್ಯೂಟರ್ ಆಪರೇಟರ್
೩೦) ವಾಹನ ಚಾಲಕ

**ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯ ಅಧಿಕಾರಿಗಳು/ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ನಡೆಸುತ್ತಿರುವ ಪರಿಷತ್ತಿನ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು:**

ಅನುದಾನ ಸಂಹಿತೆಗೆ ಒಳಪಟ್ಟಿರುವ ಖಾಯಂ ಸಿಬ್ಬಂದಿಗಳಲ್ಲಿ ಹಾಲಿ ಮೂರು ಸಿಬ್ಬಂದಿಗಳು ಮಾತ್ರ ಸೇವೆಯಲ್ಲಿ ಉಳಿದಿದ್ದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರುಗಳಿಗೆ ಈ ಕೆಳಕಂಡ ನಿಯಮಗಳು ಅನ್ವಯವಾಗುತ್ತದೆ.

೧) ಕರ್ನಾಟಕ ನಾಗರಿಕ ಸೇವಾ ನಿಯಮಗಳು – ೧೯೫೮
೨) ಕರ್ನಾಟಕ ನಾಗರಿಕ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು –೧೯೫೭
೩) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು
೪) ಕರ್ನಾಟಕ ನಾಗರಿಕ ಸೇವಾ (ಪ್ರೊಬೆಷನರಿ) ನಿಯಮಗಳು
೫) ಕರ್ನಾಟಕ ನಾಗರಿಕ ಸೇವಾ (ಜೇಷ್ಠತೆ) ನಿಯಮಗಳು
೬) ಕರ್ನಾಟಕ ಆರ್ಥಿಕ ಸಂಹಿತೆ
೭) ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ–೨೦೦೫
೮) ಇಲಾಖೆಯ ಯೋಜನೆಗಳ ಅನುಷ್ಠಾನದ ಬಗ್ಗೆ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳು/ಮಾರ್ಗಸೂಚಿಗಳು.

ಕೇಂದ್ರ ಪರಿಷತ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳು ಹಾಗೂ ಸಂಚಿತ ವೇತನ ಮತ್ತು ಗೌರವಧನ ಇದರ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಈ ಕೆಳಕಂಡ ಪರಿಷತ್ತಿನ ನಿಯಮ–ನಿಬಂಧನೆಗಳು ಹಾಗೂ ನೌಕರರ ಸೇವಾ ನಿಯಮಗಳು ಅನ್ವಯವಾಗುತ್ತವೆ.

೧) ಕನ್ನಡ ಸಾಹಿತ್ಯ ಪರಿಷತ್ತಿನ ದಿನಾಂಕ: ೩೦–೦೬–೨೦೨೨ರ ನಿಯಮ ನಿಬಂಧನೆಗಳು ಹಾಗೂ ಇದಕ್ಕೆ ಸಂಬಂಧಿಸಿದ ತಿದ್ದುಪಡಿಗಳು ಅನ್ವಯವಾಗುತ್ತವೆ. (ದಿನಾಂಕ: ೩೦–೦೬–೨೦೨೨ರ ನಿಯಮ ನಿಬಂಧನೆಗಳಲ್ಲಿನ ನಿಯಮ (೨೬), ಉಪನಿಯಮ (೧), (೨), (೩), (೪) ಮತ್ತು (೫) ಅನ್ವಯವಾಗುತ್ತದೆ.
೨) ಸಿಬ್ಬಂದಿಗಳ ಸೇವಾ ಷರತ್ತು ನಿಯಂತ್ರಣ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಪರಿಷತ್ತು ಹೊರಡಿಸುವ ನೌಕರರ ಸೇವಾ ನಿಯಮಗಳು.

**ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯ ಕಾರ್ಯಗಳು ಮತ್ತು ಜವಾಬ್ದಾರಿಗಳು:**

೧) ಬಿ.ಎಂ.ಶ್ರೀ ಮುದ್ರಣಾಲಯ ಮೇಲ್ವಿಚಾರಣೆ ಹಾಗೂ ನಿರ್ವಹಣೆ, ಮುದ್ರಣ ಯಂತ್ರೋಪಕರಣ, ಕಾಗದ ಖರೀದಿ ಇತ್ಯಾದಿ...
೨) ಗ್ರಂಥಾಲಯ, ವಾಚನಾಲಯ, ಪರಿಷತ್ ಪತ್ರಿಕೆ.

೩) ಗ್ರಂಥ ಪ್ರಕಟಣೆ, ನಿಘಂಟು, ಪುಸ್ತಕಗಳ ನೊಂದಣಿ, ಗ್ರಂಥ ದಾಸೋಹ, ಜಿಲ್ಲಾ ಸಾಹಿತ್ಯ ಪರಿಷತ್ತಿನ ಡೈರಕ್ಟರಿ, ಕನ್ನಡ ನುಡಿ/ಜಾಹೀರಾತು ವಿಭಾಗ, ಪುಸ್ತಕ ಮಾರಾಟ, ಪುಸ್ತಕ ದಾಸ್ತಾನು, ಇತರೆ ದಾಸ್ತಾನು ನಿರ್ವಹಣೆ.

೪) ಪರೀಕ್ಷಾ ವಿಭಾಗ, ಸಂಶೋಧನಾ ವಿಭಾಗದ ನಿರ್ವಹಣೆ.

೫) ಆಡಳಿತ ನಿರ್ವಹಣೆ:– ಸ್ವೀಕೃತಿ ಮತ್ತು ರವಾನೆ ವಿಭಾಗ, ಡಿ.ಟಿ.ಪಿ. ವಿಭಾಗ, ಆತಿಥ್ಯ ನಿರ್ವಹಣೆ, ಸಾರಿಗೆ ವ್ಯವಸ್ಥೆಯ ನಿರ್ವಹಣೆ, ದರಪಟ್ಟಿ ನಿರ್ವಹಣೆ.

೬) ಕಟ್ಟಡಗಳ ನಿರ್ವಹಣೆ, ಸಭಾಂಗಣ ನಿರ್ವಹಣೆ, ಕಟ್ಟಡಗಳ ಕಾಮಗಾರಿಗಳು, ಕಟ್ಟಡಗಳ ಬಾಡಿಗೆ, ಅತಿಥಿ ಗೃಹ ನಿರ್ವಹಣೆ.

೭) ನ್ಯಾಯಾಲಯದ ವ್ಯವಹಾರಗಳು, ಮಾಹಿತಿ ಹಕ್ಕು ಕಾಯ್ದೆ ೨೦೦೫ರ ಅನುಷ್ಠಾನ.

೮) ದತ್ತಿ ಕಾರ್ಯಕ್ರಮಗಳು, ಕಾರ್ಯಕಾರಿ ಸಮಿತಿ ಸಭೆ, ಸರ್ವ ಸದಸ್ಯರ ಸಭೆ, ಸಿಬ್ಬಂದಿ ವೇತನ ಬಿಲ್ಲು ಮತ್ತು ನೌಕರರ ಸೇವಾ ಬಿಲ್ಲು, ಸಿಬ್ಬಂದಿ ಮೇಲ್ವಿಚಾರಣೆ. ಸದಸ್ಯತ್ವ ಮತ್ತು ಗುರುತಿನ ಚೀಟಿ ನಿರ್ವಹಣೆ.

೯) ಜಿಲ್ಲಾ ಘಟಕಗಳ ನಿರ್ವಹಣೆ, ಆಸ್ತಿ ಮತ್ತು ಋಣ ನಿರ್ವಹಣೆ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಸಾಹಿತಿಗಳ ಜನ್ಮ ದಿನಾಚರಣೆ, ಶತಮಾನೋತ್ಸವ ಆಚರಣೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸರಕಾರದೊಂದಿಗೆ ಪತ್ರ ವ್ಯವಹಾರ, ರಾಷ್ಟ್ರೀಯ ಹಬ್ಬಗಳು, ಕನ್ನಡ ರಾಜ್ಯೋತ್ಸವ ಹಾಗೂ ಇತರ ವಿಶೇಷ ಕಾರ್ಯಕ್ರಮಗಳ ಆಯೋಜನೆ, ಪಠ್ಯ ಪುಸ್ತಕಗಳ ಪರಿಷ್ಕರಣೆ ಮತ್ತು ಪ್ರಕಟಣೆ, ಸಾಮಾಜಿಕ ಜಾಲತಾಣ ಮತ್ತು ತಂತ್ರಾಂಶದ ನಿರ್ವಹಣೆ.

೧೦) ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಉತ್ತರಗಳ ನಿರ್ವಹಣೆ.

೧೧) ಕನ್ನಡ ಸಾಹಿತ್ಯ ಪರಿಷತ್ತಿನ ಲೆಕ್ಕ ಪತ್ರ ಪರಿಶೀಲನೆ, ಹಣಕಾಸು ಸಮಿತಿ ಸಭೆ, ನಿಶ್ಚಿತ ಠೇವಣಿಗಳ ನಿರ್ವಹಣೆ ಮತ್ತು ಪರಿಶೀಲನೆ. ಬಾಡಿಗೆ, ಆಸ್ತಿಕರ, ಇತ್ಯಾದಿ ತೆರಿಗೆಗಳ ನಿರ್ವಹಣೆ. ಕ್ಯಾಶ್ ಬುಕ್ ಪರಿಶೀಲನೆ, ತ್ರೈಮಾಸಿಕ ಲೆಕ್ಕಪತ್ರ, ವಾರ್ಷಿಕ ಲೆಕ್ಕ ಪರಿಶೋಧನೆ, ಕ್ರಿಯಾ ಯೋಜನೆಗಳು (ಸಿಬ್ಬಂದಿ ಸಂಬಳ ಮತ್ತು ಪರಿಷತ್ತು ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ), ಸಮ್ಮೇಳನಗಳ ಲೆಕ್ಕ ಪತ್ರಗಳ ಪರಿಶೀಲನೆ, ಗಣಕಯಂತ್ರ ಖರೀದಿ/ಸಾಫ್ಟವೇರ್ ಸಂಬಂಧಿಸಿದ ಕಾರ್ಯಗಳು. ಇ–ಟೆಂಡರ್ ಪ್ರಕ್ರಿಯೆ, ಪಟ್ಟಿ ಕ್ಯಾಶ್, ಬ್ಯಾಂಕ್ ವ್ಯವಹಾರಗಳು, ವಿದ್ಯುತ್, ನೀರು, ದೂರವಾಣಿ ಇತ್ಯಾದಿ... ನಿರ್ವಹಣೆ.